

# ಸಿಹಿ ಕಹಿ

SIHI KAHI

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

KANNADA DAILY MORNING BAGALKOT

Volume : 08 Issue : 02 Tuesday 02-09-2025 E-mail : maruti.b.hosamani76@gmail.com Page: 4 Price : Rs. 1/-


# ಸಂಗಮನಾಥ ಸಜ್ಜನ ಅವರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ




**ಸಿಹಿ ಕಹಿ ಸುದ್ದಿ,**

**ಬೆಂಗಳೂರು** : ಜನಸಿರಿ ಫೌಂಡೇಶನ್ ಸಂಸ್ಥೆಯ ವತಿಯಿಂದ ಕೊಡ ಮಾಡುವ 2025 ನೇ. ಸಾಲಿನ ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಬೆಂಗಳೂರಿನ ಕ್ರೈಸ್ಟ್ ಶಾಲೆಯ (ಐಸಿಎಸ್ಸಿ) ಪ್ರಾಥಮಿಕ ಕನ್ನಡ ವಿಭಾಗದ ಮುಖ್ಯಸ್ಥರು, ಶಿಕ್ಷಕರು ಮತ್ತು ಯುವ ಕವಿಯಾದ ಸಂಗಮನಾಥ.ಪಿ ಸಜ್ಜನ ರವರ 15 ವರ್ಷಗಳ ಶಿಕ್ಷಣ ಸಂಘಟನೆ ಮತ್ತು ಸಾಹಿತ್ಯ ಸೇವೆಯನ್ನು ಗಮನಿಸಿ ಪ್ರಶಸ್ತಿಯನ್ನು ಬೆಂಗಳೂರಿನ ಶಿಕ್ಷಕರ ಸದನದ ಸಭಾಂಗಣದಲ್ಲಿ ಪ್ರಧಾನ ಮಾಡಲಾಯಿತು. 2025 ಜನಸಿರಿ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾದ ಡಾ, ಸಿ.ಸೋಮಶೇಖರ, ಹಿರಿಯ ನಟ ಮುಖ್ಯಮಂತ್ರಿ ಚಂದ್ರು, ಶ್ರೀಯುತ ಹಿರೇಮಗಳೂರು ಕಣ್ಣನ್, ಹಾಸ್ಯ ನಟ ವೈಜನಾಥ್ ಬಿರಾದಾರ್, ಮಿಮಿಕ್ರಿ ಗೋಪಿ, ಜನಪದ ಗಾಯಕ ನಾಗರಾಜ್ ಹೊಸಕೋಟೆ ಮತ್ತು ಜನಸಿರಿ ಫೌಂಡೇಶನ್ ನ ಮುಖ್ಯಸ್ಥರಾದ ನಾಗಲೇಖ ಮುಂತಾದ ಗಣ್ಯರ ಸಮ್ಮುಖದಲ್ಲಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ನೀಡಿ ಗೌರವಿಸಲಾಯಿತು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್ವೀರೇಶ್.ಕೆ.ಹೊಸಹಳ್ಳಿ**

# ಸೌಹಾರ್ದತೆಯಿಂದ ಬದುಕುವುದೆ ನಮ್ಮ ಜೀವಾಳ ಎಂದ ರಹೆಮತ್ ಅಲಿ

**ಸಿಹಿ ಕಹಿ ಸುದ್ದಿ,**

**ಮಾನ್ವಿ** : ಮಾನ್ವಿ ಅಂದರೆ ಸಾಕು ಸೌಹಾರ್ದತೆಯ ತವರೂರು ಎಂದು ಪ್ರತೀತಿ ಇದೆ, ಹೀಗಾಗಿ ಹಿಂದೂ ಮುಸ್ಲಿಂ ಬಾಂಧವರೆಲ್ಲರೂ ಒಂದೇ ಎಂದು ಸಾರೋಣವೆಂದು ಸಹೋದರರಿಬ್ಬರಾದ ರಹೆಮತ್ ಅಲಿ ಹಾಗೂ ಹಬೀಬ್ ಅವರು ಗಣೇಶ ವಿಸರ್ಜನೆಯ ಹಿಂದೂ ಬಾಂಧವರಿಗೆ ಅನ್ನ ಸಂತರ್ಪಣೆ ಮಾಡಿ ಮಾದರಿ ಯಾಗಿದ್ದಾರೆ.



ಹಬೀಬ್ ಮತ್ತು ರಹೆಮತ್ ಅವರು ಸಾಮಾಜಿಕ ಸೇವೆ ಮಾಡುತ್ತ ದೇಶದಲ್ಲಿರುವ ಎಲ್ಲಾ ಧರ್ಮಿಯರು ಒಂದೇಯಾಗಿ ಹಬ್ಬ ಹರಿದಿನಗಳನ್ನು ಆಚರಿಸಿದಾಗ ಮಾತ್ರ ಸೌಹಾರ್ದತೆಯ ಸಂಕೇತವನ್ನು ಸಾರಿದಂತಾಗುತ್ತದೆ ಎಂಬ ಗುಣ ಸಹೋದರರಿಬ್ಬರಲ್ಲಿ ಇದೆ ಎಂದು ವೀರಶೈವ ಲಿಂಗಾಯತ ಸಮಾಜದ ತಾಲೂಕಾಧ್ಯಕ್ಷ ಅರುಣ್ ಚಂದಾ ತಿಳಿಸಿದ್ದಾರೆ.

ಗಣೇಶ ವಿಸರ್ಜನೆಯ ಹಿಂದೂ ಬಾಂಧವರು ಸಹ ರಹೆಮತ್ ಮತ್ತು ಹಬೀಬ್ ಅವರ ಸೇವೆಯನ್ನು ಮೆಚ್ಚಿ ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ಸಾಗೋಣವೆಂದು ಗಣೇಶ ವಿಸರ್ಜನೆಯ ಹಿಂದೂ ಬಾಂಧವರು ತಿಳಿಯಲು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

# ಸಮಾಜ ಕಲ್ಯಾಣ ಅಧಿಕಾರಿಗಳ ನಿರ್ಲಕ್ಷ್ಯದಿಂದ ಪ್ರತಿಷ್ಠಿತ ಶಾಲೆಗಳಲ್ಲಿ ಸೌಲಭ್ಯ ವಂಚಿತ ಎಸ್,ಸಿ/ಎಸ್,ಟಿ ವಿದ್ಯಾರ್ಥಿಗಳು – ಶಿವಾನಂದ ಹರಿಜನ ಆರೋಪ

**ಸಿಹಿ ಕಹಿ ಸುದ್ದಿ,**

**ವಿಜಯಪುರ** : ಜಿಲ್ಲಾ ಸಮಾಜ ಕಲ್ಯಾಣ ಅಧೀನದಲ್ಲಿರುವ ಒಟ್ಟು 09 ಪ್ರತಿಷ್ಠಿತ ಶಾಲೆಗಳಿವೆ. ಈ ಶಾಲೆಗಳಿಗೆ ಇಲಾಖೆಯ ವತಿಯಿಂದ ಪ್ರತಿ ವರ್ಷ 5 ನೇ. ತರಗತಿ ಓದುತ್ತಿರುವ ಎಸ್,ಸಿ/ಎಸ್,ಟಿ ಸೌಲಭ್ಯ ವಂಚಿತ ವಿದ್ಯಾರ್ಥಿಗಳಿಗೆ ಇಲಾಖೆಯು ಅರ್ಜಿ ಆವ್ಹಾನಿಸಿ ಅವರಿಗೆ ಜಿಲ್ಲಾವಾರು ಸಿ.ಇ.ಟಿ ಪರೀಕ್ಷೆ ನಡೆಸಿ, ಅರ್ಹ ವಿದ್ಯಾಥಿ9ಗಳನ್ನು ಮೇರಿಟ್ ಮೂಲಕ ಆಯ್ಕೆ ಸಮಿತಿಯು ಸಂಬಂಧಿಸಿದ ಪ್ರತಿಷ್ಠಿತ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ (6 ರಿಂದ 10 ನೇ. ಅಥವಾ 12 ನೇ.) ಪ್ರವೇಶ ಪಡೆಯುವಂತೆ ವ್ಯವಸ್ಥೆ ಮಾಡುತ್ತಾರೆ. ಆದರೆ ಇಂತಹ ಪ್ರತಿಭಾವಂತ ವಿದ್ಯಾರ್ಥಿಗಳಿಗೆಂದೇ ಸರಕಾರ ಸಾಕಷ್ಟು ಹಣ ಆಯಾ ವಿದ್ಯಾರ್ಥಿಗಳ ಪರವಾಗಿ ಆಯಾ ಶಾಲೆಗಳಿಗೆ ಸಂದಾಯ ಮಾಡುತ್ತದೆ. ಆದರೆ ವಿದ್ಯಾರ್ಥಿಗಳ ದುರ್ದೈವ ಆಯಾ ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಒಂದು ವರ್ಷ, ಒಂದು ಬಾರಿ ಮಾತ್ರ ಸಮವಸ್ತ್ರ ಕೊಡುತ್ತಾರೆ. ಎರಡನೇ ವರ್ಷ ಇಲ್ಲ. ಇದೊಂದೇ ಸೌಲಭ್ಯ. ಇತರೆ ಯಾವುದೇ ಸೌಲಭ್ಯ ಕೊಡುವುದಿಲ್ಲ. ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಪಾಲಕರು ಕೇಳಿದಾಗ ಅವರು ಹೇಳೋದು ಸಮವಸ್ತ್ರಗಳು,



ನೋಟ್ ಪುಸ್ತಕ, ಕೊಬ್ಬರಿ ಎಣ್ಣೆ, ಪೆನ್ನು, ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ಸಲಕರಣೆಗಳು ಕೊಡಬೇಕು ಅಂತಾ ಹೇಳುತ್ತಾರೆ. ಆದ–ರೆ ಪ್ರತಿಷ್ಠಿತ ಕೆಲವು ಶಾಲೆಗಳ ಇಂತಹ ಪ್ರತಿಭಾವಂತ ಎಸ್,ಸಿ/ಎಸ್,ಟಿ ವಿದ್ಯಾರ್ಥಿಗಳಿಗೆ ಸೌಲಭ್ಯ ವಂಚಿತರನ್ನಾಗಿ ಮಾಡುತ್ತಿವೆ. ದಯವಿಟ್ಟು ಸಮಾಜ ಕಲ್ಯಾಣ ಅಧಿಕಾರಿಗಳು ಆಯಾ ಸಂಬಂಧಿಸಿದ ಶಾಲೆಗಳಿಗೆ ಭೇಟಿ ನೀಡಿ, ತಪ್ಪಿತಸ್ಥ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಒಂದು ವೇಳೆ ತಾವು ಶಾಲೆಗಳ ಸಮಿತಿ ಯವರೊಂದಿಗೆ ಅನ್ಯಾಯವಾಗಿ ಒಂದು ವೇಳೆ ಕ್ರಮ ಕೈಗೊಳ್ಳದಿದ್ದರೆ. ಮೊದಲು ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಎದುರು ಪ್ರತಿಭಟನೆ. ನಂತರ ಆಯಾ ಪ್ರತಿಷ್ಠಿತ ಶಾಲೆಗಳ ಎದುರು ಪ್ರತಿಭಟನೆ ಮಾಡುವುದು ಅನಿವಾರ್ಯವಾಗುತ್ತದೆ ಎಂದು ಜಿಲ್ಲಾ ಆರ್.ಪಿ.ಆಯ್ (ಅಂಬೇಡ್ಕರ್) ಘಟಕದ ಸಂಘಟನಾ ಸಂಚಾಲಕರಾದ ಶಿವಾನಂದ ಹರಿಜನ ಅವರು ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್ ಪತ್ರಿಕಾ ಮೂಲಕ ತಿಳಿಸಿದ್ದಾರೆ ಎಂದು ವರದಿಯಾಗಿದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಶಿವಾನಂದ.ಬಿ.ಹರಿಜನ.ಇಂಡಿ**

# ವೈದ್ಯಕೀಯ ಕಾಲೇಜು ಖಾಸಗಿ ಸಹಭಾಗಿತ್ವಕ್ಕೆ ಖಂಡನೆ



**ತಾಳಿಕೋಟಿ** : ಜಿಲ್ಲಾ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಸರ್ಕಾರ ಮುಂದಾಗಿರುವುದು ಸ್ವಾಗತಾರ್ಹ. ವಿಜಯಪುರ ಜಿಲ್ಲೆಗೆ ಸರ್ಕಾರಿ ವೈದ್ಯಕೀಯ ಕಾಲೇಜಿನ ಅವಶ್ಯಕತೆ ತುಂಬಾ ಇದೆ, ಆದರೆ ಸರ್ಕಾರ ಜಿಲ್ಲೆಯಲ್ಲಿ ಪಿಪಿಪಿ (ಪಬ್ಲಿಕ್, ಪ್ರೈವೇಟ್, ಪಾರ್ಟ್ನರ್ಶಿಪ್) ಮಾದರಿಯಲ್ಲಿ ವೈದ್ಯಕೀಯ ಕಾಲೇಜು ಆರಂಭಿಸುವ ಹುನ್ನಾರದಲ್ಲಿದೆ ಇದನ್ನು ನಾನು ತೀವ್ರವಾಗಿ ಖಂಡಿಸುತ್ತೇನೆ ಎಂದು ದಲಿತ ವಿದ್ಯಾರ್ಥಿ ಪರಿಷತ್ ತಾಳಿಕೋಟಿ ಅಧ್ಯಕ್ಷ ಗುರುಪ್ರಸಾದ್ ಬಿಜಿ ಹೇಳಿದ್ದಾರೆ. ಜಿಲ್ಲೆಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜ್ ಸ್ಥಾಪನೆ ಆಗಬೇಕೆಂದು ಹಲವಾರು ವಿದ್ಯಾರ್ಥಿ ಸಂಘಟನೆಗಳು ಕಳೆದ 15 ವರ್ಷಗಳಿಂದ ಹೋರಾಟಗಳನ್ನು ನಡೆಸುತ್ತಿವೆ ಇದರ ಫಲವಾಗಿ ಮೆಡಿಕಲ್ ಕಾಲೇಜು ಸ್ಥಾಪನೆಗೆ ಸರ್ಕಾರ ನಿರ್ಧರಿಸಿದ್ದು ಸ್ವಾಗತಾರ್ಹ ಆದರೆ ಪಿಪಿಪಿ ಮಾದರಿಯನ್ನು ಕೈಬಿಟ್ಟು ಸಂಪೂರ್ಣ ಸರ್ಕಾರಿ ಮಾದರಿಯ ವೈದ್ಯಕೀಯ ಕಾಲೇಜನ್ನು ಸ್ಥಾಪನೆ ಮಾಡಬೇಕು. ಶಿಕ್ಷಣ ಹಾಗೂ ಆರೋಗ್ಯ ಸೇವಾ ವಲಯದಲ್ಲಿ ಇರಬೇಕಾಗಿತ್ತು ಆದರೆ ಖಾಸಗೀಕರಣದ ಮೂಲಕ ಎರಡು ಕ್ಷೇತ್ರಗಳನ್ನು ಮಾರಾಟ ಮಾಡುತ್ತಿರುವುದು ಖಂಡನೀಯ. ಜಿಲ್ಲೆಯಲ್ಲಿ ಈಗಾಗಲೇ ಖಾಸಗಿ ಮೆಡಿಕಲ್ ಕಾಲೇಜುಗಳಿದ್ದು ಇದಕ್ಕೆ ಲಕ್ಷಾಂತರ ಶುಲ್ಕ ಕಟ್ಟಲು ಸಾಧ್ಯವಾಗದೆ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ತೊರೆದಿದ್ದಾರೆ ಶಿಕ್ಷಣ ಎಂಬುದು ಕೆಲವೇ ಜನರ ಸ್ವತ್ತಾಗದೆ ಎಲ್ಲರ ಸ್ವತ್ತಾಗಬೇಕು, ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಸಿಗಬೇಕಾದರೆ ಸರ್ಕಾರವೇ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು ಆಗ ಮಾತ್ರ ಬಡವರ, ಕಾರ್ಮಿಕರ, ರೈತರ ಮಕ್ಕಳಿಗೆ ಶಿಕ್ಷಣ ಸಿಗುತ್ತದೆ ಆದ್ದರಿಂದ ಸರ್ಕಾರ ಪಿಪಿಪಿ ಹೆಸರಿನಲ್ಲಿ ವೈದ್ಯಕೀಯ ಕಾಲೇಜನ್ನು ಸ್ಥಾಪಿಸದೇ ಸರ್ಕಾರಿ ಕಾಲೇಜು ಸ್ಥಾಪಿಸಬೇಕು. ಶಿಕ್ಷಣವನ್ನು ರಾಜಕಾರಣಿಗಳು, ಉದ್ಯಮಿಗಳು ಅಪಹರಿಸುವುದನ್ನು ದಲಿತ ವಿದ್ಯಾರ್ಥಿ ಪರಿಷತ್ತು ತೀವ್ರವಾಗಿ ಖಂಡಿಸುತ್ತದೆ" ಎಂದು ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾಮಾಜಿಕ–ಆರ್ಥಿಕ ಅಭಿವೃದ್ಧಿಗೆ ಗ್ರಾಮೀಣ ಕೂಟ ಕ್ರೆಡಿಟ್ ಅಕ್ಸಿಸ್ ಲಿಮಿಟೆಡ್ ಮುಂದಾಳತ್ವ

**ಇಳಕಲ್** : ಇಲಕಲ್ಲ ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಗ್ರಾಮೀಣ ಕೂಟ ಕ್ರೆಡಿಟ್ ಅಕ್ಸಿಸ್ ಲಿಮಿಟೆಡ್ ಶಾಖೆಯ ವತಿಯಿಂದ ಸಾಮಾಜಿಕ, ಆರ್ಥಿಕ ಅಭಿವೃದ್ಧಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು ಈ ಕಾರ್ಯಕ್ರಮವನ್ನು ಇಲಕಲ್ಲ ಗ್ರಾಮೀಣ ಪೊಲೀಸ್ ಠಾಣೆಯ ಕ್ರೈಂ ಪಿಎಸ್ಐ ಎಸ್. ಆರ್ ನಾಯಕ, ಎಸ್ಬಿಐ ಬ್ಯಾಂಕ್ ವ್ಯವಸ್ಥಾಪಕ ಉದಯಕುಮಾರ ದ್ಯಾಮಣ್ಣವರ ಹಾಗೂ ಕ್ರೆಡಿಟ್ ಅಕ್ಸಿಸ್ ವಿಜಯಪುರ ಪ್ರಾದೇಶಿಕ ವ್ಯವಸ್ಥಾಪಕ ರಾಮಕೃಷ್ಣರವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು.

ಕಾರ್ಯಾಗಾರದಲ್ಲಿ ಆರ್ಥಿಕ ಸಾಕ್ಷರತೆ, ಸಾಮಾಜಿಕ ಭದ್ರತಾ ಹಾಗೂ ಸೈಬರ್ ಕ್ರೈಂ ಕುರಿತು ಎಚ್ಚರಿಕೆ ಕ್ರಮಗಳ ಬಗ್ಗೆ ಜನರಿಗೆ ತಿಳಿಸಲಾಯಿತು.

ಪಿಎಸ್ಐ ಎಸ್.ಆರ್ ನಾಯಕ ಮಾತನಾಡಿ, "ಇತ್ತೀಚಿನ ದಿನಗಳಲ್ಲಿ ಬ್ಯಾಂಕ್ ಕರೆ ಹೆಸರಿನಲ್ಲಿ ಬರುವ ಒಟಿಪಿ, ಕೆವೈಸಿ ಕೇಳುವ ಕರೆಗಳು ವಂಚಕರ ತಂತ್ರ. ಸಾರ್ವಜನಿಕರು ಇಂತಹ ಕರೆಗಳಿಗೆ ಸ್ಪಂದಿಸ ಬಾರದು. ಕಣ್ಣು ತಪ್ಪಿನಿಂದ ಮೋಸವಾದರೆ ಕೂಡಲೇ 1930ಗೆ ಕರೆಮಾಡಿ ಸೈಬರ್ ವಂಚಕರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದರು ಈ ಕಾರ್ಯಕ್ರಮದಲ್ಲಿ ಇನ್ನೂರವ ಅತಿಥಿಗಳಾಗಿ ಆಗಮಿಸಿದ್ದ ಇಳಕಲ್ ಎಸಬಿಐ



ಶಾಖೆಯ ವ್ಯವಸ್ಥಾಪಕ ಉದಯಕುಮಾರ್ ದ್ಯಾಮಣ್ಣವರ ಮಾತನಾಡಿ ಮೂದಲು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಆದ್ಯತೆ ಕೊಡಬೇಕು" ಎಂದು ಸಲಹೆ ನೀಡಿ "ಗ್ರಾಹಕರು ತಮ್ಮ ಕ್ರೆಡಿಟ್ ಪ್ರಾಮಾಣಿಕವಾಗಿ ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಸಾಲವನ್ನು ಸರಿಯಾದ ಸಮಯದಲ್ಲಿ ಮರು ಪಾವತಿಸುವುದರಿಂದ ಭವಿಷ್ಯದಲ್ಲಿ ಆರ್ಥಿಕ ಸಂಕಷ್ಟ ತಪ್ಪಿಸಬಹುದು.

ನಮ್ಮ ಬ್ಯಾಂಕ್ ಹಾಗೂ ಕ್ರೆಡಿಟ್ ಅಕ್ಸಿಸ್ ಸಂಸ್ಥೆಗಳು ಗ್ರಾಹಕರಿಗೆ ಸಂಕಷ್ಟ ಸಮಯದಲ್ಲಿ ಸಾಲ ಸೌಲಭ್ಯ ಒದಗಿಸುತ್ತವೆ" ಎಂದರು.

ಈ ಕಾರ್ಯಕ್ರಮದಲ್ಲಿ ರಿಸ್ಕ್ ಡಿಪಾರ್ಟ್ಮೆಂಟ್ ಚಾಂದಪಾಷಾ ರಗಟಿ ವಲಯ ವ್ಯವಸ್ಥಾಪಕರು ನಾಗಪ್ಪ ತಳವಾರ, ಎಚ್ ಆರ್ ತರಬೇತಿ ಡಿಪಾರ್ಟ್ಮೆಂಟ್ ಹನುಮೇಶ, ಬಿಎಸ್ಸಿ ಮಾಲತೇಶ, ಇಳಕಲ್ಲ ಗ್ರಾಮೀಣ ಕೂಟ ವ್ಯವಸ್ಥಾಪಕರಾದ ಪ್ರಶಾಂತ, ಜಯಪ್ಪ ಹಾಗೂ ಸಿಬ್ಬಂದಿ ವರ್ಗದವರು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಪ್ರಭುಲಿಂಗೇಶ್ವರ ನೂತನ "ರಥ"ದ ಪುರ ಪ್ರವೇಶ: ಕಿಚಡಿ ಜಾತ್ರೆಯಲ್ಲಿ ಜರುಗಲಿದೆ ರಥೋತ್ಸವ



**ಚಿಮ್ಮಡ** : ಗ್ರಾಮದಲ್ಲಿ ಸಪ್ಟೆಂಬರ್ ನಾಲ್ಕರಂದು ನಡೆಯಲಿರುವ ಕಿಚಡಿ ಜಾತ್ರೆಗಾಗಿ ಸುಮಾರು ನಾಲ್ವತ್ತು ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾದ ಬೃಹತ್ ರಥದ ಪುರ ಪ್ರವೇಶ ಕಾರ್ಯಕ್ರಮ ರವಿವಾರ ನಡೆಯಿತು.

ಸ್ಥಳೀಯ ವಿರಕ್ತಮಠದ ಪ್ರಭು ಮಹಾಸ್ವಾಮಿಗಳ ಹಾಗೂ ಜನಾರ್ಧನ ಮಹಾರಾಜರ ಸಾನಿಧ್ಯದಲ್ಲಿ ನಡೆದ ನೂತನ ರಥದ ಪುರಪ್ರವೇಶ ಕಾರ್ಯಕ್ರಮದಲ್ಲಿ ಸ್ಥಳಿಯ ಬಸ್ ನಿಲ್ದಾಣದ ಮಹಾದ್ವಾರದಿಂದ ನೂರಾರು ಮಹಿಳೆಯರಿಂದ ಆರತಿ ಕುಂಭ, ಸಕಲ ವಾದ್ಯ ವೃಂದಗಳೊಂದಿಗೆ ಗ್ರಾಮದ ಪ್ರಭುಲಿಂಗೇಶ್ವರ ದೇವಸ್ಥಾನದವರೆಗೆ ಮೆರವಣಿಗೆ ಮೂಲಕ ತರಲಾಯಿತು. ನಂತರ ವಿಶೇಷ ಪೂಜೆ, ಮಹಾ ಮಂಗಳಾರತಿಯ ನಂತರ ಮಹಾಪ್ರಸಾದ ವಿತರಣೆಯಾಯಿತು. ಪ್ರಭುಲಿಂಗ ಸೇವಾ ಸಮಿತಿಯ ಪ್ರಮುಖರಾದ ರಾಮಣ್ಣ ಮುಗಳಖೋಡ, ಮುಂಡಲಿಕಪ್ಪಾ ಪೂಜಾರಿ, ಅಣ್ಣಪ್ಪಗೌಡ ಪಾಟೀಲ, ಬಾಳಪ್ಪ ಹಳಿಂಗಳಿ, ರಾಚಯ್ಯ ಮಠಪತಿ, ರಾಮಣ್ಣ ಬಗನಾಳ, ಗುರಪ್ಪ ಬಳಗಾರ, ಬಸಪ್ಪ ಮುಗಳಖೋಡ, ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಗುರಲಿಂಗಪ್ಪ ಪೂಜಾರಿ, ಶಂಕರ ಬಟಕುರ್ಕಿ, ಪರಪ್ಪಾ ಪಾಲಭಾಂವಿ, ಬೀರಪ್ಪ ಹಳೆಮನಿ, ಪ್ರಕಾಶ ಪಾಟೀಲ, ಬಸವರಾಜ ಕುಂಚನೂರ, ಉಮೇಶ ಪೂಜಾರಿ, ಅಶೋಕ ಧಡೂತಿ, ಆನಂದ ಕವಟಿ, ಅಶೋಕ ಮೋಟಗಿ, ಪ್ರಭು ಮುಧೋಳ, ಮಹಾಲಿಂಗ ಮಾಯಣ್ಣವರ, ಮಹಾಂತೇಶ ಜಾಲಿಕಟ್ಟಿ, ಪ್ರಕಾಶ ಪಾಲಭಾಂವಿ, ಮಹಾಲಿಂಗ ಬಳಗಾರ, ಪ್ರವೀಣ ಪೂಜಾರಿ, ಶ್ರೀಶೈಲ ಮಠಪತಿ, ಅವ್ವಣ್ಣಪ್ಪ ಮುಗಳಖೋಡ ಸೇರಿದಂತೆ ಹಲವಾರು ಜನ ಪ್ರಮುಖರು ಭಾಗವಹಿಸಿದ್ದರು.

# ಅಲ್ಪಸಂಖ್ಯಾತರಿಗೆ ವಿವಿಧ ಇಲಾಖೆಗಳ ಸರ್ಕಾರಿ ಸೌಲಭ್ಯಗಳ ಮಾಹಿತಿ ಯಶಸ್ವಿ ಕಾರ್ಯಾಗಾರ

**ಇಳಕಲ್**: ಸರ್ಕಾರದಿಂದ ಅಲ್ಪಸಂಖ್ಯಾತರಿಗೆ ಸಿಗುವ ವಿವಿಧ ಇಲಾಖೆಗಳ ಸೌಲಭ್ಯಗಳ ಕುರಿತು ಜಮಾತೆ ಇಸ್ಲಾಮಿ ಹಿಂದ್ ಕರ್ನಾಟಕ ಇಳಕಲ್ ಶಾಖೆ ವತಿಯಿಂದ ಇಂದು ಮಧ್ಯಾಹ್ನ 3 ಗಂಟೆಯಿಂದ 6–30 ರವರೆಗೆ ಇಬ್ರಾಹಿಂ ಮಸ್ಜೀದದಲ್ಲಿ ಯಶಸ್ವಿಯಾಗಿ ಜರುಗಿತು

ಕೆಎಮ್ ಡಿಸಿ ವತಿಯಿಂದ ಜಿಲ್ಲಾ ವ್ಯವಸ್ಥಾಪಕ ಜಿಲಾನಿ ಜುಮನಾಳ ಹಲವು ಯೋಜನೆಗಳ ಕುರಿತು ವಿವರಿಸಿ ಸಬ್ಸಿಡಿ ಸಾಲ ಹೊರತು ಪಡಿಸಿ ಉಳಿದ ಸಾಲದ ಮೊತ್ತವನ್ನು ಸರಿಯಾದ ಸಮಯಕ್ಕೆ ಮರುಪಾವತಿಸಿ ಬೇರೆಯವರಿಗೂ ಅನುಕೂಲವಾಗುವಂತೆ ಸಹಕರಿಸಬೇಕೆಂದು ಕರೆ ನೀಡಿದರು.




ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಶ್ರೀಮತಿ ಸಾವಿತ್ರಿ ಹಿರೇಮಠ ಹಾಗೂ ಸುರೇಶ ಹುಲಮನಿ ಮಾತನಾಡಿದರು. ಆರೋಗ್ಯ ಇಲಾಖೆಯ ಜಿ ಬಿ ಭದ್ರಣ್ಣವರ ವಿವಿಧ ಆರೋಗ್ಯ ಹಾಗೂ ಆಯುಷ್ಮಾನ ಭಾರತ ಯೋಜನೆ ಕುರಿತು ವಿವರಿಸಿದರು. ಅಲ್ಪಸಂಖ್ಯಾತರ ಮಾಹಿತಿ ಕೇಂದ್ರದ ಕೆ ಎಚ್ ಸೋಲಾಪೂರ ಸರ್ಕಾರದಿಂದ ಅಲ್ಪಸಂಖ್ಯಾತರಿಗೆ ದೊರೆಯುವ ವಿವಿಧ ಯೋಜನೆಗಳ ಕುರಿತು ವಿವರವಾಗಿ ತಿಳಿಸಿದರು. ವಕ್ಫ ಬೋರ್ಡ್ ನಿಂದ ಫಯಾಜ ಕಲಾದಗಿ ಯವರು ದರ್ಗಾ, ಮಸ್ಜಿದ್ ಗಳಿಗೆ ದೊರೆಯುವ ಸೌಲಭ್ಯಗಳ ಕುರಿತು ವಿವರಿಸಿದರು.

ಅಧ್ಯಕ್ಷತೆಯನ್ನು ಮುಹಮ್ಮದ ಯುಸೂಫ ಕನ್ನಿ ವಹಿಸಿ ಮಾತನಾಡಿದರು.

ವೇದಿಕೆಯಲ್ಲಿ ಉಸ್ಮಾನಗಣಿ ಹುಮ್ನಾಬಾದ, ಅಬ್ದುಲ್ ರಜಾಕ್ ತಟಗಾರ, ಮೆಹಬೂಬ ಆಲಂಬಡಗನ, ಹುಸೇನಬಾಷಾಸೂಳಿಭಾವಿ, ಮುಹಮ್ಮದ್ ಯಾಸೀನ್ ಗಬ್ಬೂರು ಸೇರಿದಂತೆ ಇತರರು ಉಪಸ್ಥಿತರಿದ್ದರು. ರಿಯಾಜ್ ಅಹಮ್ಮದ್ ಕೊಪ್ಪಳ ನಿರೂಪಿಸಿದರು, ಅಬೀಬ್ ತಾವರಗೇರಿ ಸ್ವಾಗತಿಸಿದರು, ಹುಸೇನಬಾಷಾ ಸೂಳಿಭಾವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಮುರ್ತುಜಾ ಕಾಕಬಾಳ ವಂದಿಸಿದರು.

**ವರದಿ ಕೆ ಎಚ್ ಸೋಲಾಪೂರ**

# ಎಸ್. ಪಿ. ಮತ್ತು ಡಿ. ಸಿ. ಇಂದ ರ್‍ಯಾಲಿಗೆ ಚಾಲನೆ



**ಜಮಖಂಡಿ :** ನಗರದ ಹಳೆಯ ತಹಶೀಲ್ದಾರ ಕಚೇರಿಯಿಂದ ಆರಂಭಗೊಂಡ ಪ್ರಥಮಾಚಾರ್ಯ ಪ.ಪೂ. 108 ಶಾಂತಿಸಾಗರ ಮಹಾರಾಜರ ಎಪ್ಪತ್ತನೇ ಪುಣ್ಯತಿಥಿ ನಿಮಿತ್ಯ ಬೈಕ್ ರ್‍ಯಾಲಿಗೆ ಜಿಲ್ಲಾಧಿಕಾರಿ ಸಂಗಪ್ಪ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯೆಲ್ ಜಂಟಿಯಾಗಿ ಚಾಲನೆ ನೀಡಿದರು.

ದಕ್ಷಿಣ ಭಾರತ ಜೈನ ಸಭಾ ವೀರಸೇವಾದಳ ಮಧ್ಯವರ್ತಿ ಸಮಿತಿ ಮತ್ತು ತಾಲೂಕಾ ಜೈನ ಸಮಾಜದ ಸಹಯೋಗದಲ್ಲಿ ಸೋಮವಾರ ಬೃಹತ್ ಬೈಕ್ ರ್‍ಯಾಲಿಯು ಗವಳಿ ಗಲ್ಲಿ, ಹನುಮಾನ ಚೌಕ, ಥೇಟರ ರಸ್ತೆ, ಅಶೋಕ ವೃತ್ತ, ಡಾ.ರಾಜಕುಮಾರ ರಸ್ತೆ ಮೂಲಕ ಎ.ಜಿ.ದೇಸಾಯಿ ವೃತ್ತದಿಂದ ನಗರದ ಬಿ.ಎಲ್.ಡಿ.ಇ. ಶಿಕ್ಷಣ ಸಂಸ್ಥೆಯ ಮೈದಾನ ತಲುಪಿತು. ಮೈದಾನದಲ್ಲಿ ಧರ್ಮ ಧ್ವಜವನ್ನು ಹಾರಿಸಿ ಗೌರವ ಸಲ್ಲಿಸಲಾಯಿತು.

ರ್‍ಯಾಲಿಯಲ್ಲಿ ಜೈನ ಸಮಾಜದ ಮುಖಂಡ ಅರುಣಕುಮಾರ ಶಹಾ, ಶಾಸಕ ಜಗದೀಶ ಗುಡಗುಂಟಿ, ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ,

ಆನಂದ ನ್ಯಾಮಗೌಡ, ಜಿ. ಎಸ್. ನ್ಯಾಮಗೌಡ, ನಗರಸಭೆ ಅಧ್ಯಕ್ಷ ಈಶ್ವರ ವಾಳೆನ್ನವರ, ಸುಶೀಲಕುಮಾರ ಬೆಳಗಲಿ, ಬಾಹುಬಲಿ ಉಪಾಧ್ಯೆ, ಸಂದೀಪ ಬೆಳಗಲಿ, ವರ್ಧಮಾನ ನ್ಯಾಮಗೌಡ, ನೇಮಣ್ಣ ಜಕನೂರ, ಪಾರೀಸ ಸಕಳೆ, ಜಯಪಾಲ ನಡುವಿನಮನಿ, ಬಾಹುಬಲಿ ಪಾಟೀಲ, ಯಾದಪ್ಪ ನಂದೇಶ್ವರ, ಬಾಹುಬಲಿ ಕಡಕೋಳ, ಕಲ್ಲಪ್ಪ ಗಿರಡ್ಡಿ, ದೇವಲ ದೇಸಾಯಿ ಸಹಿತ ನೂರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

# ವಿದ್ಯುತ್ ಚಾಲಿತ ಹೊಲಿಗೆ ಯಂತ್ರಕ್ಕೆ ಅರ್ಜಿ




**ಬಾಗಲಕೋಟೆ :** ಜಿಲ್ಲಾ ಪಂಚಾಯತ ಗ್ರಾಮೀಣ ಕೈಗಾರಿಕಾ ವಿಭಾಗದಿಂದ ಪ್ರಸಕ್ತ ಸಾಲಿಗೆ ಜಿಲ್ಲಾ ಉದ್ಯಮ ಕೇಂದ್ರ, ವಿಶೇಷ ಘಟಕ, ಗಿರಿಜನ ಉಪಯೋಜನೆಯಡಿ ಮತ್ತು ವೃತ್ತಿಪರ ಕುಶಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಸಲಕರಣೆಗಳ ಸರಬರಾಜು ಯೋಜನೆಯಡಿ ವಿದ್ಯುತ್ ಚಾಲಿತ ಹೊಲಿಗೆಯಂತ್ರಗಳನ್ನು ನೀಡುವ ಸಲುವಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಗಳನ್ನು ಆನ್‌ಲೈನ್ (http://bagalkot.nic.in) ಮೂಲಕ ಸೆಪ್ಟೆಂಬರ 26 ರೊಳಗಾಗಿ ಸಲ್ಲಿಸಬೇಕು. ಒಂದು ಕುಟುಂಬಕ್ಕೆ ಒಂದು ಅರ್ಜಿ ಸಲ್ಲಿಸತಕ್ಕದ್ದು, ಅಭ್ಯರ್ಥಿ ಗ್ರಾಮೀಣ ಪ್ರದೇಶದ ಮಹಿಳೆಯರು ಅರ್ಜಿ ಸಲ್ಲಿಸಬೇಕು. 10 ತರಗತಿ ಪಾಸಾಗಿದ್ದು, ಪರಿಶಿಷ್ಟಜಾತಿ ಮತ್ತು ಪಂಗಡ ಅಭ್ಯರ್ಥಿಗಳಿಗೆ ಕನಿಷ್ಟ 18 ರಿಂದ 45 ವರ್ಷ ಮತ್ತು ಇತರೆ ವರ್ಗದವರಿಗೆ ಗರಿಷ್ಟ 38 ವರ್ಷ ಮೀರಿರಬಾರದು ಎಂದು ಜಿಲ್ಲಾ ಪಂಚಾಯತ ಕೈಗಾರಿಕಾ ವಿಭಾಗದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದೂಸಂ.08354-223744, 7760007080, 9620721729ಗೆ ಕಚೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ.

# ಬಿಜೆಪಿ ಪ್ರಚಾರಪ್ರಿಯ ಪಕ್ಷ: ಕಾಂಗ್ರೆಸ್ ಅಭಿವೃದ್ಧಿ ಪರ ಪಕ್ಷ-ಸಿದ್ದು ಕೊಣ್ಣೂರ

**ಚಿಮ್ಮಡ :** ಬಿಜೆಪಿ ಅಭಿವೃದ್ಧಿ ಕೆಲಸ ಮಾಡದೆಯೇ ಸುಳ್ಳು ಪ್ರಚಾರ ಮಾಡುತ್ತದೆ. ಆದರೆ ಕಾಂಗ್ರೆಸ್ ಅಭಿವೃದ್ಧಿ ಕೆಲಸ ಮಾಡಿಯೂ ಪ್ರಚಾರ ಪಡೆದುಕೊಳ್ಳುವುದಿಲ್ಲ. ಸರಕಾರದ ಯೋಜನೆಗಳನ್ನು ಜನರಿಗೆ ತಲುಪಿಸಲು ಪ್ರಾರಂಭಿಸಲಾಗಿರುವ ಕಾಂಗ್ರೆಸ್ ಪಕ್ಷದ ಸಾಮಾಜಿಕ ಜಾಲತಾಣ ವಿಭಾಗ ಇನ್ನುಮುಂದೆ ಹೆಚ್ಚೆಚ್ಚು ಮತದಾರರನ್ನು ತಲುಪಲಿದೆ ಎಂದು ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಹೇಳಿದರು.

ಗ್ರಾಮದಲ್ಲಿ ಸೋಮವಾರ ರಾತ್ರಿ ಹಮ್ಮಿಕೊಳ್ಳಲಾಗಿದ್ದ ಬಾಗಲಕೋಟ ಜಿಲ್ಲಾ ಸಾಮಾಜಿಕ ಜಾಲತಾಣದ ಸಂಚಾಲಕರಾಗಿ ನೇಮಕಗೊಂಡ ಸಲೀಮ ಸರಕಾವಸ ಅವರ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು ಬಡವರಿಗೆ ಜೀವನಮಟ್ಟ ಸುಧಾರಿಸಲು ರಾಜ್ಯ ಸರಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿಯೂ ರಾಜ್ಯವನ್ನು ಪ್ರಗತಿಯತ್ತ ಕೊಂಡೊಯ್ಯುತ್ತಿದೆ.

ಬಡವರು, ಹಿಂದುಳಿದವರ ಏಳ್ಗೆಯೆ ಕಾಂಗ್ರೆಸ್ ಪಕ್ಷದ ಧ್ಯೇಯವಾಗಿದ್ದು ಸಾಮಾಜಿಕ ಜಾಲತಾಣದ ಮೂಲಕ ಯುವ



ಮತದಾರರನ್ನು ತಲುಪುತ್ತಿರುವ ಕಾಂಗ್ರೆಸ್ ಮುಂಬರುವ ಚುನಾವಣೆಗಳಲ್ಲಿ ಭರ್ಜರಿ ಜಯ ಗಳಿಸಲಿದೆ ಎಂದರು.

ಕಾಂಗ್ರೆಸ್ ನಗರ ಘಟಕದ ಅಧ್ಯಕ್ಷ ಮಲ್ಲಪ್ಪ ಸಿಂಗಾಡಿ ಮಾತನಾಡಿ ಕಟ್ಟಕಡೆಯ ವ್ಯಕ್ತಿಗಳೂ ರಾಜಕೀಯವಾಗಿ ಬೆಳೆಯುವುದು ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಸಾಧ್ಯ.

ಇದಕ್ಕೆ ಸಲೀಮ ಸರಕಾವಸ ಉತ್ತಮ ಉದಾಹರಣೆ. ಪಕ್ಷದ ಈ ಜವಾಬ್ದಾರಿಯನ್ನು ಬಳಸಿಕೊಂಡು ಉತ್ತಮ ಕೊಡುಗೆ ನೀಡುವ ಮೂಲಕ ಉತ್ತಮ ನಾಯಕನಾಗಿ ಬೆಳೆಯಬೇಕೆಂದರು.

ಕೆಪಿಸಿಸಿ ಸದಸ್ಯ ಬಸವರಾಜ ಕೊಕಟನೂರ, ಪಂಡಿತ ಭೋಸಲೆ, ಅಶೋಕ ಧಡೂತಿ, ಮಹಾಲಿಂಗ ಮಾಯನ್ನವರ ಮಾತನಾಡಿದರು.

ಎಪಿಎಂಸಿ ಅಧ್ಯಕ್ಷರಾದ ದೇವಲ ದೇಸಾಯಿ, ಸಂಜು ಜೋತಾವರ, ಭರಮು ಉಳ್ಳಾಗಡ್ಡಿ, ಸತ್ಯಪ್ಪ ನೇಸೂರ, ನೂರಸಾಬ ನದಾಫ, ಮಹಮ್ಮದ ಝಾರೆ, ಶಿವಪ್ಪಾ ಪಾಟೀಲ, ಅಜಯಕುಮಾರ ಗಾಣಿಗೇರ, ಅಶೋಕ ಮೋಟಗಿ, ಮಲಿಕ್ ಸರಕಾವಸ, ಅರುಣಕುಮಾರ ಗಾಣಿಗೇರ, ಶೌಕತ ಮಿರ್ಜಿ ಸೇರಿದಂತೆ ಹಲವಾರು ಜನ ಪ್ರಮುಖರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಬಾಗಲಕೋಟ ಜಿಲ್ಲಾ ಸಾಮಾಜಿಕ ಜಾಲತಾಣದ ಸಂಚಾಲಕರಾಗಿ ನೇಮಕಗೊಂಡ ಸಲೀಮ ಸರಕಾವಸರನ್ನು ಕಾಂಗ್ರೆಸ್ ಮುಖಂಡರು ಹಾಗೂ ವಿವಿಧ ಸಂಘಟನೆಯ ಪ್ರಮುಖರು ಸತ್ಕರಿಸಿ ಅಭಿನಂದಿಸಿದರು. ರವಿ ದೊಡವಾಡ ಸ್ವಾಗತಿಸಿದರು. ಗಾಯಕ ಮನು ಸೊಗಸಾಗಿ ನಿರೂಪಿಸಿದರು.

# ಸಾಮರಸ್ಯ ಮತ್ತು ಸಮಾಧಾನದ ಬದುಕನ್ನು ಕಟ್ಟಿಕೊಳ್ಳಿ

**ಬನಹಟ್ಟಿ :** ನಮ್ಮಲ್ಲಿಯ ಜಾತಿ ವೈಷಮ್ಯವನ್ನು ಹೋಗಲಾಡಿಸಿಕೊಳ್ಳಬೇಕು. ದ್ವೇಷದಿಂದ ಜೀವನದಲ್ಲಿ ಯಾವುದನ್ನೂ ಸಾಧಿಸಲು ಸಾಧ್ಯವಿಲ್ಲ. ಸಾಮರಸ್ಯದ ಮತ್ತು ಸಮಾಧಾನದ ಬದುಕನ್ನು ನಮ್ಮದಾಗಿಸಿಕೊಳ್ಳಬೇಕು. ಶಿಶುನಾಳ ಶರೀಫರು ಜಾತಿ, ಮತ, ಪಂಥ ಎನ್ನಲಾರದೆ ಭಾವೈಕ್ಯದ ಹರಿಕಾರರಾಗಿ ಬಾಳಿದವರು. ಅಂಥವರ ಉಪದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಬದುಕನ್ನು ಸಾಗಿಸಬೇಕು ಎಂದು ಗದಗದ ಶಿವಾನಂದ ಮಠದ ಶರಣೆ ಮುಕ್ತಾತಾಯಿ ತಿಳಿಸಿದರು.

ಅವರು ಇಲ್ಲಿಯ ಸಿದ್ಧರಾಮೇಶ್ವರ ಕಲ್ಯಾಣ ಮಂಟಪದಲ್ಲಿ ಶ್ರಾವಣ ಮಾಸದ ಅಂಗವಾಗಿ ಶಿಶುನಾಳ ಶರೀಫರ ಕುರಿತು ಹಮ್ಮಿಕೊಂಡ ಪ್ರವಚನ ಮುಕ್ತಾಯ ಸಮಾರಂಭದಲ್ಲಿ ಮಾತನಾಡಿದರು.

ಬೈಲಹೊಂಗಲ ಮತ್ತು ಬನಹಟ್ಟಿಯ ಮುಮುಕ್ಷ ಮಠದ ಮಹಾದೇವ ಸರಸ್ವತಿ ಸ್ವಾಮೀಜಿ ಮಾತನಾಡಿ, ಮಾನವ ಜನ್ಮ ಅತ್ಯಂತ ಶ್ರೇಷ್ಠವಾದುದು. ಮಾನವ ಜನ್ಮ ಸಾರ್ಥಕವಾಗಬೇಕಾದರೆ ನಾವೆಲ್ಲರೂ




ಪುಣ್ಯ ಕಾರ್ಯಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು.

ಪುರಾಣ, ಪ್ರವಚನ, ಸಂತ ಮಹಾತ್ಮರ ಜೀವನ ಚರಿತ್ರೆಗಳನ್ನು ಕೇಳುವುದರಿಂದ ಜೀವನದಲ್ಲಿ ಮುಕ್ತಿಯನ್ನು ಪಡೆದು ಕೊಳ್ಳಬಹುದಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರವಚನ ಸೇವಾ ಸಮಿತಿ ಅಧ್ಯಕ್ಷ ರಾಮಣ್ಣ ಭದ್ರನ್ನವರ ಮಾತನಾಡಿ, ಶ್ರಾವಣ ಮಾಸ ನಮ್ಮೆಲ್ಲರಿಗೆ ಹೊಸ ಚಿಂತನೆಗಳನ್ನು ತಿಳಿಸಿ ಕೊಡುತ್ತದೆ. ಜೀವನವು ಪಾವನವಾಗಬೇಕಾದರೆ ಇಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎಂದರು.

ಶಂಕರ ಜಾಲಿಗಿಡದ, ಮಲ್ಲಿನಾಥ ಕಕಮರಿ, ರವಿ ಕೊಣ್ಣೂರ, ರಮೇಶ ಸೋರಗಾಂವಿ, ಪ್ರಕಾಶ ಬುರುಡ, ರಮೇಶ ಕೊಣ್ಣೂರ, ವೈ. ಬಿ. ಕೊರಡೂರ, ಕಲ್ಲಪ್ಪ ಪತ್ತಾರ, ಡಾ. ಕಾವೇರಿ ಹಳ್ಯಾಳ, ಶೈಲಜಾ ನುಚ್ಚಿ, ಮಹಾನಂದಾ ಕುಳ್ಳಿ, ಸುಜಾತಾ ಅರಳಿಕಟ್ಟಿ, ರಜನಿ ಶೇಠೆ ಸೇರಿದಂತೆ ಇನ್ನೂ ಅನೇಕ ಭಗಿನಿಯರು ಭಾಗವಹಿಸಿದ್ದರು.

## ಗೌರವ್ವ ಕಲ್ಲಪ್ಪ ಮಾಕಾಣಿ. (ಕಡಬಲ್ಲವರ) ನಿಧನ



**ಮಹಾಲಿಂಗಪುರ :** ಪಟ್ಟಣದ ಹಮಾಲರ ಕಾಲನಿಯ ನಿವಾಸಿ, ಕಣ್ಣೀರ ಶೋಧನೆ ವಾರಪತ್ರಿಕೆ ಸಂಪಾದಕರು, ಸಾಮಾಜಿಕ ಹೋರಾಟಗಾರರು ಕಲ್ಲಪ್ಪ ಕಡಬಲ್ಲವರ ಅವರ ಪತ್ನಿ ಶ್ರೀಮತಿ ಗೌರವ್ವ ಕಲ್ಲಪ್ಪ ಮಾಕಾಣಿ (ಕಡಬಲ್ಲವರ) ತಮ್ಮ 70 ನೆಯ ವಯಸ್ಸಿನಲ್ಲಿ ಆಗಸ್ಟ್ 26 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಆತ್ಮಕ್ಕೆ ಚಿರಶಾಂತಿ ದೊರೆಯಲಿ ಎಂದು ಧಡಲ್ ಬಾಜಿ ಕನ್ನಡ ದಿನಪತ್ರಿಕೆ ಬಳಗದಿಂದ ಪ್ರಾರ್ಥಿಸುತ್ತೇನೆ.

# ಗುಳೇದಗುಡ್ಡದಲ್ಲಿ 'ಯುಸ್ಮಾಕಂ ಸಂಸ್ಕೃತಂ'

**ಗುಳೇದಗುಡ್ಡ :** ಪಟ್ಟಣದ ಹೊಸಪೇಟೆಯ ಶ್ರೀ ಸಂಗನಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಯುಸ್ಮಾಕಂ ಸಂಸ್ಕೃತಂ ಎಂಬ ವಿನೂತನ ಸಂಸ್ಕೃತ ಸಾಂಸ್ಕೃತಿಕ ಕಾರ್ಯಕ್ರಮ ನಡೆದು ನೋಡುಗರ ಗಮನ ಸೆಳೆಯಿತು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಸಂಸ್ಕೃತ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು ಹಾಗೂ ಸಂಸ್ಕೃತ ಭಾರತಿ ಗಿರಿನಗರ ಮತ್ತು ಶ್ರೀ ಶಾರದಾ ವಿದ್ಯಾಲಯ, ಗುಳೇದಗುಡ್ಡ ಹಾಗೂ ಶ್ರೀ ಶಾರದಾ ಸಂಸ್ಕೃತ ಪಾಠಶಾಲೆ ಕೋಟೆಕಲ್ ಸಂಯುಕ್ತವಾಗಿ ಹಮ್ಮಿಕೊಂಡ ಯುಸ್ಮಾಕಂ ಸಂಸ್ಕೃತ ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸಂಸ್ಕೃತ ಸಪ್ತಾಹದ ನಂತರ ಯುಸ್ಮಾಕಂ ಸಂಸ್ಕೃತ ಎನ್ನುವ ಈ ವಿಶೇಷ ಸಂಸ್ಕೃತ ಕಾರ್ಯಕ್ರಮವನ್ನು ಬಹಳಷ್ಟು ಅರ್ಥಪೂರ್ಣವಾಗಿ ಇಲ್ಲಿ ನೆರವೇರಿಸಲಾಯಿತು.



ಅಮರೇಶ್ವರ ಮಠದ ಡಾ.ನೀಲಕಂಠ ಶಿವಾಚಾರ್ಯ ಮಹಾಸ್ವಾಮಿಗಳು, ಯುಸ್ಮಾಕಂ ಸಂಸ್ಕೃತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಂಸ್ಕೃತ ಅತ್ಯಂತ ಸರಳವಾದ ಭಾಷೆ. ಪ್ರತಿಯೊಬ್ಬರೂ ಸಂಸ್ಕೃತ ಭಾಷೆಯನ್ನು ಕಲಿಯುವ ಮೂಲಕ ಸಂಸ್ಕೃತಿ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು. ಎಲ್ಲ ಭಾಷೆಗಳ ತಾಯಿ ಎನಿಸಿಕೊಂಡ ಸಂಸ್ಕೃತವನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಸಂಸ್ಕೃತ ದೇವ ಭಾಷೆ ಎನಿಸಿಕೊಂಡಿದೆ. ಇಂತಹ ಇಂತಹ ಪವಿತ್ರ ಭಾಷೆಯನ್ನು ನಾವೆಲ್ಲ ಕಲಿಯುವ ಮೂಲಕ ಸಂಸ್ಕೃತ ಭಾಷೆಯನ್ನು ಉಳಿಸಿ ಬೆಳೆಸಬೇಕೆಂದರು.

ಶಾರದಾ ಸಂಸ್ಕೃತ ಪಾಠಶಾಲೆ ಮುಖ್ಯ ಶಿಕ್ಷಕಿ ಸುನಂದಾ ರಾಸನಕರ, ರುದ್ರಪ್ಪ ಲಮಾಣಿ, ಎಂ.ಎಸ್.ತಾಂಡೂರು, ಶಾರದಾ ವಿದ್ಯಾಲಯದ ಸಂಗಮೇಶ್ ಉಂಕಿ, ದೀಪಾ ಬಂಕಾಪುರ, ಶಂಕರ ಲಕ್ಕುಂಡಿ, ರವಿ ಅಲದಿ, ನೂರಂದಪ್ಪ ಮಳ್ಳಿ, ಸಚಿನ ರಾಂಪುರ, ವಿರುಪಾಕ್ಷ ರೋಡಗ್ಯೆ ಇತರರು ಇದ್ದರು.

ಯುಸ್ಮಾಕಂ ಸಂಸ್ಕೃತಂ ಕಾರ್ಯಕ್ರಮದಲ್ಲಿ ಮಕ್ಕಳಿಂದ ಸಂಸ್ಕೃತ ನೃತ್ಯ, ಸಂಸ್ಕೃತ ಸಂಭಾಷಣೆ, ಸಂಸ್ಕೃತ ಶ್ಲೋಕ, ಸಂಸ್ಕೃತ ಏಕಪಾತ್ರಾಭಿನಯ ಸೇರಿದಂತೆ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ರೋಬೋಟಿಕ್ ಯುಗದತ್ತ ಆರೋಗ್ಯ ಸೇವೆ: ಬಡರೋಗಿಗೆ ಉಚಿತ ಶಸ್ತ್ರ ಚಿಕಿತ್ಸೆ: ಡಾ. ಗುಳೇದ




**ಬಾಗಲಕೋಟೆ :** ಬಡ ಮತ್ತು ಅಸಹಾಯಕರಿಗೆ ಆಶಾಕಿರಣವಾಗಿ ಬಾಗಲಕೋಟೆಯ ಗುಳೇದ ಆಸ್ಪತ್ರೆಯಲ್ಲಿ ರೋಬೋಟಿಕ್ ಯಂತ್ರದ ಮೂಲಕ ಮೊಣಕಾಲು ಚಿಪ್ಪು ಮರುಜೋಡಣೆ ಶಸ್ತ್ರಚಿಕಿತ್ಸೆ ಉಚಿತವಾಗಿ ನೆರವೇರಿಸಲಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಇದೇ ಮೊದಲ ಬಾರಿಗೆ ಇಂತಹ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನೆರವೇರಿದ ಪ್ರಕರಣ ಇದಾಗಿದೆ ಎಂದು ಡಾ. ಉದಯಕುಮಾರ ಗುಳೇದ ತಿಳಿಸಿದರು.

ನಗರದ ಆಸ್ಪತ್ರೆಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, "ನಮ್ಮ ಆಸ್ಪತ್ರೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ 30 ಸಾವಿರಕ್ಕೂ ಹೆಚ್ಚು ಹೊರ ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದ್ದು, 3 ಸಾವಿರ ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನಡೆಸಲಾಗಿದೆ. ಅದರಲ್ಲಿ 1 ಸಾವಿರ ಕ್ಕೂ ಹೆಚ್ಚು ಮೊಣಕಾಲು ಚಿಪ್ಪು ಮರುಜೋಡಣೆ ಶಸ್ತ್ರಚಿಕಿತ್ಸೆಗಳಾಗಿವೆ. ಇತ್ತೀಚೆಗೆ ವಿಜಯಪುರ ಜಿಲ್ಲೆಯ ವೃದ್ಧ ರೋಗಿಯೊಬ್ಬರಿಗೆ ರೋಬೋಟಿಕ್ ಯಂತ್ರದ ಮೂಲಕ ಉಚಿತವಾಗಿ ಮೊಣಕಾಲು ಚಿಪ್ಪು ಮರುಜೋಡಣೆ ಮಾಡಲಾಗಿದೆ" ಎಂದು ವಿವರಿಸಿದರು.

ನೀರಲಕೇರಿ ಬಳಿ ಇರುವ ಮುನಿ ಹಿರಿಯ ನಾಗರಿಕರ ವಿದ್ಯಾಶ್ರಮದಲ್ಲಿದ್ದ ಬಡ ವೃದ್ಧ ರೋಗಿಗೆ ಈ ಉಚಿತ ಚಿಕಿತ್ಸೆ ನೀಡಲಾಗಿದೆ.

ಉಚಿತ ಶಸ್ತ್ರಚಿಕಿತ್ಸೆಯೊಂದಿಗೆ ಆಸ್ಪತ್ರೆ ಬಡ ಜನತೆಗೆ ಸೇವಾ ಮನೋಭಾವದಿಂದ ಕಾರ್ಯನಿರ್ವಹಿಸುತ್ತಿದೆ ಎಂದು ಅವರು ಹೇಳಿದರು. ಆಸ್ಪತ್ರೆಯಿಂದ ಇತ್ತೀಚಿನ ದಿನಗಳಲ್ಲಿ 20 ಉಚಿತ ಆರೋಗ್ಯ ತಪಾಸಣಾ ಶಿಬಿರಗಳು ಆಯೋಜನೆಗೊಂಡಿದ್ದು, ಸಾವಿರಾರು ಜನರಿಗೆ ಉಚಿತವಾಗಿ ತಪಾಸಣೆ ಹಾಗೂ ಚಿಕಿತ್ಸೆ ನೀಡಲಾಗಿದೆ. ವೈದ್ಯರ ತಂಡದಲ್ಲಿ ಡಾ.ಅಪೂರ್ವಾ ಗುಳೇದ, ಡಾ. ರಾಹುಲ್ ಇಂಗನಾಳ, ಡಾ. ಅರುಣ ಹಳ್ಳಿ, ಡಾ. ಮಲ್ಲಿಕಾರ್ಜುನ ಪಾಟೀಲ, ಡಾ. ವಿಕಾಸ ಪರ್ವತೀಕರ, ಡಾ. ಮಹೇಶ ಪೂಜಾರಿ, ಡಾ. ರಮೇಶ ಸಿಂಗರಡ್ಡಿ, ಡಾ. ಮಹಾಂತೇಶ ಮಠ, ಡಾ. ಶ್ರೀಧರ ಕಾಟವಾಕರ, ಡಾ. ಸಹನಾ ರಾವ್, ಡಾ. ರೇವಕೇಶ ಮಿರ್ಜಿ, ಡಾ. ನಿತಿನ್ ಶರ್ಮಾ, ಡಾ. ಭೀಮಸೇನ ಬಾಗಲಕೋಟ, ಡಾ. ಪ್ರಜ್ವಲ ನರೇಗಲ್ಲ, ಡಾ. ರಮೇಶ ನೀಲನ್ನವರ, ಡಾ. ಮುಸಾಬ ಬಾವಾಖಾನ ಸೇರಿದಂತೆ ಅನೇಕ ನುರಿತ ತಜ್ಞ ವೈದ್ಯರು ಸೇವೆ ಸಲ್ಲಿಸುತ್ತಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಅಪೂರ್ವಾ ಗುಳೇದ ಉಪಸ್ಥಿತರಿದ್ದರು.

# ಧ್ಯಾನ-ಆಧ್ಯಾತ್ಮದ ಬೆಳಕು ಹರಿಸಿದ ಸೇವೆಗೆ ಸುವರ್ಣ ಮಹೋತ್ಸವ

**ಬಾಗಲಕೋಟೆ :** ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ಬಾಗಲಕೋಟೆ ಸೇವಾ ಕೇಂದ್ರದಲ್ಲಿ ಭಾನುವಾರ ಸುವರ್ಣ ಮಹೋತ್ಸವ ಹಾಗೂ ರಾಜಯೋಗಿನಿ ಅಂಬಿಕಾ ದೀದಿಜಿ ಮತ್ತು ಕಿರಿಯ ಸಹೋದರಿಯರ ಸನ್ಮಾನ ಸಮಾರಂಭ ವಿಜೃಂಭಣೆಯಿಂದ ಜರುಗಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ರಾಜಯೋಗಿನಿ ಅಂಬಿಕಾ ದೀದಿಜಿ ಅವರು, "ಮಾನವ ಜೀವನದಲ್ಲಿ ಶಾಂತಿ, ಪ್ರೀತಿ, ಸಹಾನುಭೂತಿ ಹಾಗೂ ಮೌಲ್ಯಾಧಾರಿತ ಬದುಕು ಅಳವಡಿಸಿಕೊಂಡರೆ ಮಾತ್ರ ಸುಖಸಮಾಜ ನಿರ್ಮಾಣ ಸಾಧ್ಯ. ಬ್ರಹ್ಮಕುಮಾರಿ ಸಂಸ್ಥೆಯು ಕಳೆದ ಐದು ದಶಕಗಳಿಂದ ಆಧ್ಯಾತ್ಮಿಕ ಬೆಳಕು ಹರಡುತ್ತಾ, ಜನರಲ್ಲಿ ಮಾನವೀಯತೆ ಹಾಗೂ ಧ್ಯಾನದ ಶಕ್ತಿಯ ಮೂಲಕ ಶಾಂತಿ ಮಾರ್ಗ ತೋರಿಸುತ್ತಿದೆ" ಎಂದು ಹೇಳಿದರು.

ಕುಮಾರೇಶ್ವರ ವಿಶ್ವಧರ್ಮ ಶಾಂತಾಶ್ರಮದ ಅಧ್ಯಕ್ಷ ಜಿ.ಎನ್. ಪಾಟೀಲ ಅವರು, "2001ರಲ್ಲಿ ನಾನು ಬಾಗಲಕೋಟೆ



ಪಟ್ಟಣಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದಾಗ ನಮ್ಮ ಆಶ್ರಮಕ್ಕೆ ನಿವೇಶನ ಬೇಕೆಂದು ಮನವಿ ಮಾಡಲಾಗಿತ್ತು. ಆಗ ಕೇವಲ ಮುಳುಗಡೆಯಾಗುತ್ತಿದ್ದ ಆಶ್ರಮಗಳಿಗೆ ಮಾತ್ರ ನಿವೇಶನ ನೀಡುವ ನಿಯಮವಿತ್ತು.

ಆದರೆ ಸರ್ಕಾರದ ಒಪ್ಪಿಗೆ ಪಡೆದು ಒಂದು ನಿವೇಶನ ನೀಡಿದಾಗ ಯಾವುದೇ ತೊಂದರೆ ಎದುರಾಗಲಿಲ್ಲ. ಇಂದು ಕೇವಲ ಒಂದು ನಿವೇಶನದಿಂದ ಇಷ್ಟು ಭವ್ಯ ಸೇವಾ ಕೇಂದ್ರವನ್ನು ನಿರ್ಮಿಸಿರುವುದು ಸಹೋದರಿಯರ ಶ್ರಮ ಮತ್ತು ನಿಸ್ವಾರ್ಥ ಸೇವಾ ಮನೋಭಾವದ ಫಲ" ಎಂದು ಶ್ಲಾಘಿಸಿದರು.

ಸಂಸ್ಥೆಯ ಹಿರಿಯರು ಮಾತನಾಡಿ, "ಬ್ರಹ್ಮಕುಮಾರಿ ಸೇವಾ ಕೇಂದ್ರವು ಸಮಾಜಮುಖಿ ಚಟುವಟಿಕೆಗಳು, ಆಧ್ಯಾತ್ಮಿಕ ಶಿಬಿರಗಳು, ಮಹಿಳಾ ಸಬಲೀಕರಣ ಕಾರ್ಯಕ್ರಮಗಳು ಮತ್ತು ವಿದ್ಯಾರ್ಥಿಗಳ ವ್ಯಕ್ತಿತ್ವಾಭಿವೃದ್ಧಿಗೆ ವಿಶೇಷ ಕೊಡುಗೆ ನೀಡಿದೆ. ಬಾಗಲಕೋಟೆ ಸೇವಾ ಕೇಂದ್ರವು ಆಧ್ಯಾತ್ಮಿಕ ಶಕ್ತಿ ಕೇಂದ್ರವಾಗಿ ರೂಪುಗೊಂಡಿದೆ" ಎಂದು ಕೊಂಡಾಡಿದರು.

ಕಾರ್ಯಕ್ರಮದಲ್ಲಿ ಅಂಬಿಕಾ ದೀದಿಜಿ ಹಾಗೂ 30 ಕ್ಕೂ ಕಿರಿಯ ಸಹೋದರಿಯರಿಗೆ ಸನ್ಮಾನ ಸಲ್ಲಿಸಲಾಯಿತು. ಇದೇ ಸಂದರ್ಭದಲ್ಲಿ ಅಂಬಿಕಾ ದೀದಿಜಿಯವರ ಹುಟ್ಟುಹಬ್ಬವನ್ನು ಸಹ ಅದ್ದೂರಿಯಾಗಿ ಆಚರಿಸಲಾಯಿತು.

ರಾಜಯೋಗಿನಿ ಬಿ.ಕೆ. ಪ್ರಭಾ ಅವರು ದಿವ್ಯ ಸಾನಿಧ್ಯ ವಹಿಸಿದ್ದರು. ರಾಜಯೋಗಿನಿ ಬಿ.ಕೆ. ಮೀರಾ ಅಧ್ಯಕ್ಷತೆ ವಹಿಸಿದ್ದರು. ನಿವೃತ್ತ ನ್ಯಾಯಾಧೀಶ ಡಿ. ವೈ. ಬಸಾಪೂರ ಹಾಗೂ ನಗರ ಸಭೆ ಅಧ್ಯಕ್ಷೆ ಶ್ರೀಮತಿ ಸವಿತಾ ಲೆಂಕಣ್ಣವರ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಬಿ.ಕೆ. ನಾಗರತ್ನ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಬಿ.ಕೆ. ರೇಣುಕಾ ನಿಡಗುಂದಿ ಹಾಗೂ ಬಿ.ಕೆ. ಬಸವರಾಜ ಪಾಟೀಲ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಬೆಳಗಾವಿ, ವಿಜಯಪುರ ಹಾಗೂ ಬಾಗಲಕೋಟೆ ಜಿಲ್ಲೆಯ ಸಹೋದರ ಸಹೋದರಿಯರ ಭಾಗವಹಿಸಿದ್ದರು.

# ವಿವಿಧ ಸ್ನಾತಕೋತ್ತರ ವಿಭಾಗಗಳ ಪ್ರವೇಶಾತಿ ಅರ್ಜಿ ಅವಧಿ ವಿಸ್ತರಣೆ: ಕೊಪ್ಪಳ ವಿಶ್ವವಿದ್ಯಾಲಯ

**ಕೊಪ್ಪಳ :** ಕೊಪ್ಪಳ ವಿಶ್ವವಿದ್ಯಾಲಯದ 2025-26ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ಪ್ರಥಮ ವರ್ಷದ ಪ್ರವೇಶಾತಿಗೆ ಅರ್ಜಿ ದಿನಾಂಕ ವಿಸ್ತರಿಸಲಾಗಿದೆ. ಕೊಪ್ಪಳ ವಿಶ್ವವಿದ್ಯಾಲಯದ ಮುಖ್ಯ ಆವರಣ, ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ ಮತ್ತು ಗಂಗಾವತಿ ಹಾಗೂ ಕೊಪ್ಪಳ ವಿಶ್ವವಿದ್ಯಾಲಯದ ಸಂಯೋಜಿತ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನೇತರ ಮಹಾವಿದ್ಯಾಲಯಗಳಲ್ಲಿನ ಪ್ರಥಮ ವರ್ಷದ ಎಂ.ಎ. ಕನ್ನಡ, ಇಂಗ್ಲೀಷ್, ಇತಿಹಾಸ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ಪ್ರದರ್ಶನ ಕಲೆ, ಮಹಿಳಾ ಅಧ್ಯಯನ ವಿಭಾಗ, ಪತ್ರಿಕೋದ್ಯಮ, ಎಂ.ಕಾಂ., ಎಂ.ಎಸ್ಸಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಭೂಗೋಳಶಾಸ್ತ್ರ ಮತ್ತು ಗಣಿತಶಾಸ್ತ್ರ ಕೋರ್ಸುಗಳಿಗೆ UUMS https://uucms.Karnataka.gov.in/ ತಂತ್ರಾಂಶದ ಮುಖಾಂತರ ಅರ್ಜಿ ಸಲ್ಲಿಸುವ ದಿನಾಂಕವನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಗಸ್ಟ್ 31. 2025ರ ವರೆಗೆ ವಿಸ್ತರಿಸಲಾಗಿದೆ.

ಅರ್ಜಿ ಶುಲ್ಕಗಳ ವಿವರ ಹಾಗೂ ಅರ್ಜಿಗಳನ್ನು ಸಲ್ಲಿಸಲು ಪಾಲಿಸಬೇಕಾದ ಮಾನದಂಡಗಳಿಗೆ ಸಂಬಂಧಿಸಿದ ಮಾಹಿತಿಯನ್ನು ವಿಶ್ವವಿದ್ಯಾಲಯದ ಜಾಲತಾಣ https://WWW.koppaluniversity.ac.in. ಗೆ ಭೇಟಿ ನೀಡಿ ಅಥವಾ ಪ್ರವೇಶಾತಿ ಪಡೆಯಲಿಚ್ಛಿಸುವ ವಿದ್ಯಾರ್ಥಿಗಳು ಕೊಪ್ಪಳ ಸರ್ಕಾರಿ ತಾಂತ್ರಿಕ ಮಹಾವಿದ್ಯಾಲಯ, ತಳಕಲ್ ಮುಖ್ಯ ಆವರಣ 4ನೇ ಮಹಡಿ, ಕೊಪ್ಪಳ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಯಲಬುರ್ಗಾ ಮತ್ತು ಗಂಗಾವತಿ ಹಾಗೂ ಸಂಯೋಜಿತ ಮಹಾವಿದ್ಯಾಲಯಗಳಿಗೆ ನೇರವಾಗಿ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಕೊಪ್ಪಳದ ಪ್ರಭಾರ ಕುಲಸಚಿವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಧರ್ಮ ಗ್ರಂಥಗಳಲ್ಲಿದೆ ಸಹಬಾಳ್ವೆ, ಸಾಮರಸ್ಯದ ಸಂದೇಶ: ಹುಸೇನ್ ಕಂದಗಲ್

**ಕುಷ್ಟಗಿ :** 'ಧರ್ಮವೆಂದರೆ ಜನಮನಗಳನ್ನು ಒಂದುಗೂಡಿಸುವುದು. ಧರ್ಮಗಳು, ಧರ್ಮಗ್ರಂಥಗಳ ಬಗ್ಗೆ ಪೂರ್ವಾಗ್ರಹ ಪೀಡಿತರಾಗದೆ ಅವುಗಳಲ್ಲಿನ ಸಾರವನ್ನು ಅರಿತು ನಡೆಯಬೇಕು. ಕುರ್‌ಆನ್ ಪ್ರವಚನದ ಮಾದರಿಯಲ್ಲಿಯೇ ವೇದ, ಭಗವದ್ಗೀತೆ, ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಪ್ರಚನಗಳೂ ನಡೆಸುವ ಮೂಲಕ ಸಹಬಾಳ್ವೆಗೆ ಮುಂದಾಗುವುದು ಶ್ರೇಷ್ಠತೆ ಎನಿಸಿಕೊಳ್ಳುತ್ತದೆ' ಎಂದು ಕುರ್‌ಆನ್ ಪ್ರವಚನಕಾರ ಲಾಲ್ ಹುಸೇನ್ ಕಂದಗಲ್ ಹೇಳಿದರು.

ಪಟ್ಟಣದಲ್ಲಿ ಮುಸ್ಲಿಂ ಯುವ ಸಮಿತಿ, ಜಮಾತೆ ಇಸ್ಲಾಮಿ ಹಿಂದ್ ಸಹಯೋಗದಲ್ಲಿ ಮೂರು ದಿನಗಳವರೆಗೆ ಹಮ್ಮಿಕೊಳ್ಳಲಾಗಿದ್ದ ಕನ್ನಡದಲ್ಲಿ ಕುರ್‌ಆನ್ ಪ್ರವಚನ




ಸಮಾರೋಪ ಕಾರ್ಯಕ್ರಮದಲ್ಲಿ ಪ್ರವಾದಿ ಮುಹಮ್ಮದ್ ಹಾಗೂ ಅವರ ಸಂದೇಶಗಳು ವಿಷಯವಾಗಿ ವಿಶೇಷ ಉಪನ್ಯಾಸ ನೀಡಿದ ಅವರು, 'ಇಸ್ಲಾಂನಲ್ಲಿ ಕೋಮುವಾದ ಇಲ್ಲ. ಬಸವಣ್ಣನವರ ಸಂದೇಶದಂತೆ ಮಾನವೀಯತೆ, ಆತ್ಮೀಯತೆ, ಸಮಾನತೆ ಭ್ರಾತೃತ್ವದಿಂದ ಬದುಕು ಸಾಗಿಸುವ ಸಂದೇಶವಿದೆ.

ಅದರಲ್ಲಿ ಸಮಾನತೆ ಆದರ್ಶ ಕಾಣಬಹುದಾಗಿದೆ. ಭಾರತದ ಏಕತೆ ಧರ್ಮ ನಿಷ್ಠೆ, ಸತ್ಯ, ನ್ಯಾಯದ ಪರ ಪ್ರಜ್ಞೆ ನಮ್ಮಲ್ಲಿ ಜಾಗೃತಿಗೊಳ್ಳಬೇಕು. ಜಾತಿಗಿಂತ ದೇಶ ಬೆಳೆಯಬೇಕು ಎಂಬ ಹೃದಯ ವೈಶಾಲ್ಯತೆಯಲ್ಲಿಯೇ ದೇಶದ ಎಲ್ಲ ಸಮಸ್ಯೆಗಳಿಗೆ ಪರಿಹಾರವಿದೆ' ಎಂದು ಹೇಳಿದರು.

ಶಿರೂರಿನ ಬಸವಲಿಂಗ ಸ್ವಾಮೀಜಿ ಆಶೀರ್ವಚನ ನೀಡಿದರು. ಮಾಜಿ ಶಾಸಕ ಕೆ.ಶರಣಪ್ಪ, ವಕೀಲ ಫಕೀರಪ್ಪ ಚಳಗೇರಿ, ಮೌಲಾಸಾಬ್ ಗುಮಗೇರಿ ಇತರರು ಮಾತನಾಡಿದರು.

ಸಯ್ಯದ್ ಅತ್ತಾರ, ಬಿ.ಎಂ. ಜೋಷಿ, ಬಾಲಾಜಿ ಬಳಿಗಾರ, ಮೋಹನಲಾಲ್ ಜೈನ್, ನಬಿಸಾಬ್ ಕುಷ್ಟಗಿ, ಡಾ.ಶೇಖ ಜವ್ವಾದ ಹುಸೇನ್, ಡಾ.ಶಾಮೀದ ದೋಟಿಹಾಳ, ವಕೀಲ ಅಮರೇಗೌಡ ಪಾಟೀಲ ಸೇರಿದಂತೆ ಅನೇಕ ಪ್ರಮುಖರು ಹಾಜರಿದ್ದರು. ಮೆಹಬೂಬ್‌ಸಾಬ್ ಸ್ವಾಗತಿಸಿದರು.

# ಗಡ್ಡಿಗ್ರಾಮದಲ್ಲಿ 4 ಹಸು, ಕರು ಕಳವು

**ಗಂಗಾವತಿ :** ತಾಲ್ಲೂಕಿನ ಗಡ್ಡಿ ಗ್ರಾಮದ ಆಗೋಲಿ ರಸ್ತೆಯ ಕುಂಬಾರ ಮುದುಕಪ್ಪ ಜಮೀನಿನಲ್ಲಿ ರಮೇಶ ಎಂಬುವವರಿಗೆ ಸೇರಿದ ನಾಲ್ಕು ಹಸು, ಒಂದು ಕರುವನ್ನು ಭಾನುವಾರ ಕಳವು ಮಾಡಲಾಗಿದೆ.

ರಮೇಶ ಅವರು ಸಂಜೆ ಜಮೀನಿನಲ್ಲಿ ಹಸುಗಳನ್ನು ಕಟ್ಟಿಹಾಕಿ, ಮನೆಗೆ ಹೋಗಿದ್ದರು.

ಸೋಮವಾರ ಬೆಳಿಗ್ಗೆ ಜಮೀನಿಗೆ ಬಂದು ನೋಡಿದಾಗ, ಜಾನುವಾರು ಇರಲಿಲ್ಲ. ಅಂದಾಜು 2.5 ಲಕ್ಷ ಮೌಲ್ಯದ ನಾಲ್ಕು ಹಸುಗಳಿದ್ದವು. ಭಾನುವಾರ ರಾತ್ರಿ ದುಷ್ಕರ್ಮಿಗಳು ಅಶೋಕ ಲೈಲಾಂಡ್‌ನಲ್ಲಿ ಕಳವು ಮಾಡಿಕೊಂಡು ಪರಾರಿಯಾಗಿರುವ ಬಗ್ಗೆ ಸ್ಥಳೀಯರಿಂದ ಸಂಶಯ ವ್ಯಕ್ತವಾಗಿದೆ.

ಘಟನಾ ಸ್ಥಳಕ್ಕೆ ಗಂಗಾವತಿ ಗ್ರಾಮೀಣ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಈಚೆಗೆ ಇದೇ ಗ್ರಾಮದಲ್ಲಿ ಸುರೇಶ ಎಂಬುವವರಿಗೆ



ಸೇರಿದ 9 ಕುರಿಗಳು ಕಳವಾಗಿದ್ದವು.

ಈ ಭಾಗದಲ್ಲಿ ಹಸು, ಕುರಿಗಳ ಕಳ್ಳತನ ನಿರಂತರವಾಗಿದ್ದು,

ಈ ಬಗ್ಗೆ ಪೊಲೀಸ್ ಇಲಾಖೆ ಗಮನಹರಿಸಬೇಕಿದೆ ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

# ಅಧಿಕಾರಿಗಳಿಂದ ರಾಯನಕೆರೆ ತಡೆಗೋಡೆ ತುರ್ತು ದುರಸ್ತಿ

**ತಾವರಗೇರಾ :** ಭರ್ತಿಯಾಗಿರುವ ರಾಯನಕೆರೆಯ ತಡೆಗೋಡೆ ಮತ್ತು ಗೇಟ್‌ವಾಲ್ ಮೂಲಕ ಅಪಾರ ಪ್ರಮಾಣದ ನೀರು ಹರಿದು ಪೋಲಾಗುತ್ತಿದ್ದು, ಸಾರ್ವಜನಿಕರ ಆಗ್ರಹದ ಮೇರೆಗೆ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ, ಪರಿಶೀಲನೆ ನಡೆಸಿದರು. ಬಳಿಕ ತುರ್ತು ದುರಸ್ತಿ ಕಾರ್ಯಕ್ಕೆಗೊಂಡರು.

ಕೆರೆ ನೀರು ಕಾಲುವೆ ಮೂಲಕ ಹರಿಯದೆ, ಬೇರೆ ಸ್ಥಳದಿಂದ ಹರಿದು ವೈಜನಾಥ ದೇವಸ್ಥಾನ, ಇತರೆ ಸ್ಥಳಕ್ಕೆ ಅಪಾರ ನೀರು ನುಗ್ಗಿದ ವರದಿಯನ್ನು 'ಪ್ರಜಾವಾಣಿ' ಪತ್ರಿಕೆಯಲ್ಲಿ 'ಮಾಯವಾದ ರಾಯನಕೆರೆ ಕಾಲುವೆಗಳು' ಎಂಬ ಶೀರ್ಷಿಕೆಯಲ್ಲಿ ಆಗಸ್ಟ್ 24ರಂದು ಪ್ರಕಟಿಸಿತ್ತು.

ವರದಿಯಿಂದ ಎಚ್ಚೆತ್ತುಕೊಂಡ ಇಲಾಖೆ ಅಧಿಕಾರಿಗಳುತುರ್ತುಕ್ರಮಕ್ಕೆಗೊಂಡಿದ್ದಾರೆ. ಪಟ್ಟಣ ಪಂಚಾಯಿತಿ ಆಡಳಿತ ಮತ್ತು ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ಸ್ಥಳದಲ್ಲಿ ಬೀಡು ಬಿಟ್ಟು, ತಡೆಗೋಡೆ ದುರಸ್ತಿ ಕಾರ್ಯಕ್ಕೆಗೊಂಡಿದ್ದಾರೆ.

ಸದ್ಯ ಪ್ರತಿ ಚೀಲದಲ್ಲಿ 25 ಕೆಜಿ ಮಣ್ಣು ತುಂಬಿದ 2 ಸಾವಿರಕ್ಕೂ ಹೆಚ್ಚು ಚೀಲಗಳನ್ನು ಹಾಕಿದ್ದು, ಸತತ ಎರಡು ದಿನ ಪ.ಪಂ



ವಾಹನಗಳು, ಕಾರ್ಮಿಕರು ಸೇರಿದಂತೆ ಕೆಲಸದಲ್ಲಿ ತೊಡಗಿದ್ದು, ನೀರು ಹರಿವಿನ ಪ್ರಮಾಣ ಕಡಿಮೆಯಾಗಿದೆ.

ಆದರೆ ಕೆರೆ ಕೆಳಭಾಗದ ಅಯ್ಯಪ್ಪಸ್ವಾಮಿ ದೇವಸ್ಥಾನ ಹಿಂದೆ ಬೃಹತ್ ಬಂಡೆಕಲ್ಲು ಹಾಕಿ ಮುಚ್ಚಿರುವ ಮತ್ತು ನೆಲಸಮ ಮಾಡಿರುವ ಕಾಲುವೆಯನ್ನು ಮರುನಿರ್ಮಿಸಿ, ನೀರು ಸಮರ್ಪಕವಾಗಿ ಹರಿದು ಹೋಗುವಂತೆ ಕ್ರಮಕ್ಕೆಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದರು.

ಸಣ್ಣ ನೀರಾವರಿ ಇಲಾಖೆ ಸಹಾಯಕ ಕಿರಿಯ ಎಂಜಿನಿಯರ್ ಪ್ರವೀಣಕುಮಾರ ಮಾತನಾಡಿ, 'ಸದ್ಯ ನೀರು ಪೋಲಾಗುವುದನ್ನು ತಡೆಯಲು ತುರ್ತು ದುರಸ್ತಿ ಕೈಗೊಳ್ಳಲಾಗಿದೆ.

ಶಾಶ್ವತ ಪರಿಹಾರಕ್ಕೆ ಇಲಾಖೆ ಕ್ರಿಯಾಯೋಜನೆ ಮತ್ತು ಸರ್ಕಾರದ ಅನುದಾನದಲ್ಲಿ ಕಾಮಗಾರಿ ಕಾರ್ಯ ಮಾಡಬೇಕಿದೆ.

ಕೆರೆ ನೀರು ಪೋಲಾದರೆ ಜನರಿಗೆ ನೀರಿನ ಸಮಸ್ಯೆ ಉಂಟಾಗುತ್ತದೆ.

ಹೀಗಾಗಿ ಸದ್ಯ ಚೀಲಗಳಲ್ಲಿ ಮಣ್ಣು ತುಂಬಿ ತಡೆಗೋಡೆಗೆ ಹಾಕಲಾಗಿದೆ' ಎಂದು ಹೇಳಿದರು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ, ಕಂದಾಯ ಇಲಾಖೆ ಸಿಬ್ಬಂದಿ, ಸಣ್ಣ ನೀರಾವರಿ ಇಲಾಖೆ ಸಹಾಯಕ ಕಾರ್ಯ ಪಾಲಕ ದೇವೆಂದ್ರಪ್ಪ, ಗುತ್ತಿಗೆದಾರ ಅಶೋಕ ಬಳ್ಳೊಳ್ಳಿ, ಪ.ಪಂ ಸಿಬ್ಬಂದಿ ಕಾರ್ಮಿಕರು ಹಾಜರಿದ್ದರು.

# ಅಧಿಕಾರಿಗಳು ಸರ್ಕಾರಿ ಜಾಗ ಕಂಡುಹಿಡಿಯಿರಿ: ಶಾಸಕ ಕೆ. ರಾಘವೇಂದ್ರ ಹಿಟ್ನಾಳ




**ಕೊಪ್ಪಳ :** 'ಸರ್ಕಾರಿ ಜಾಗ ಕಬಳಿಸಿ ವೈಯಕ್ತಿಕ ಮನೆ, ಮಳಿಗೆಗಳನ್ನು ನಿರ್ಮಿಸಿಕೊಂಡಿದ್ದಾರೆ. ಅಂತಹವುಗಳನ್ನು ಅಧಿಕಾರಿಗಳು ಪರಿಶೀಲಿಸಬೇಕು' ಎಂದು ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ನಗರದ ತಾ.ಪಂ ಸಭಾಂಗಣದಲ್ಲಿ ಸೋಮವಾರ ನಡೆದ ತಾ.ಪಂ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, 'ಅಧಿಕಾರಿಗಳು ಕ್ರಿಯಾಶೀಲರಾಗಿ ಮಾಹಿತಿ ನೀಡಬೇಕು. ಇಲ್ಲವಾದರೆ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಪತ್ರ ಬರೆಯುತ್ತೇವೆ' ಎಂದು ಎಚ್ಚರಿಕೆ ನೀಡಿದರು.

ತಾಲ್ಲೂಕಿನಲ್ಲಿ 87 ಹಾಲು ಉತ್ಪಾದಕ ಸಂಘಗಳಿವೆ. ಗ್ರಾಮಕ್ಕೊಂದರಂತೆ ಕನಿಷ್ಠ 100 ಸಂಘ ರಚಿಸಬೇಕು. ಎಲ್ಲ ಯೋಜನೆಗೆ ಅರ್ಜಿ ಪಡೆದು ಸಲ್ಲಿಸಬೇಕು. ನಂದಿನಿ ಪಾರ್ಲರ್‌ಗೆ ಜಾಗ ಗುರುತಿಸಬೇಕು. ತಾಲ್ಲೂಕಿನ ಎಲ್ಲ ವಸತಿ ನಿಲಯಗಳಲ್ಲಿ ಆಹಾರ ಗುಣಮಟ್ಟ ಕಾಪಾಡಿಕೊಳ್ಳಬೇಕು. ತೊಂದರೆ ಬಾರದಂತೆ ಅಧಿಕಾರಿಗಳು ಕ್ರಮ ಜರುಗಿಸಬೇಕು' ಎಂದು ಹೇಳಿದರು.

ಎಸಿ ಕ್ಯಾ. ಮಹೇಶ ಮಾಲಗಿತ್ತಿ ಮಾತನಾಡಿ, 'ಉಪಗ್ರಾಮ,ಕಂದಾಯಗ್ರಾಮಕ್ಕೆಆಸಕ್ತಿತೋರಿಸಿದರೆ, ಕೆಲಸದ ಭಾರ ಹೆಚ್ಚಲಿದೆ ಎಂಬ ಕಾರಣಕ್ಕೆಪಿಡಿಒಗಳು ತಲೆಕಡೆಸಿಕೊಳ್ಳುತ್ತಿಲ್ಲ. ಇದನ್ನುಬಿಟ್ಟುಕ್ರಿಯಾಶೀಲರಾಗಿ ಕೆಲಸ ಮಾಡಬೇಕು. ನಿರ್ಲಕ್ಷ್ಯ ವಹಿಸಿದರೆ ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.

ತಹಶೀಲ್ದಾರ್ ವಿಠ್ಠಲ ಚೌಗಲಾ, ತಾ.ಪಂ ಇಒ ದುಂಡಪ್ಪ ತುರಾದಿ, ಕೆಡಿಪಿ ಸದಸ್ಯರಾದ ಯಲ್ಲನಗೌಡ, ನಾಗರಾಜ ಹಾಜರಿದ್ದರು.

# ರಸ್ತೆಗಾಗಿ ಆಗ್ರಹಿಸಿ ಸೇವಾಲಾಲ ನಗರ (ತಾಂಡಕ್ಕೆ) ನಿವಾಸಿಗಳ ಪ್ರತಿಭಟನೆ



**ವಿಜಯಪುರ:** ವಿಜಯಪುರ ನಗರದ ವಾರ್ಡ್ ನಂ 4ರ ವ್ಯಾಪ್ತಿಯಲ್ಲಿ ಬರುವ ಸೇವಾಲಾಲ ನಗರ (ತಾಂಡಕ್ಕೆ) ರಸ್ತೆ ಒದಗಿಸುವಂತೆ ಆಗ್ರಹಿಸಿ ತಾಂಡಾ ನಿವಾಸಿಗಳು ಪ್ರತಿಭಟನೆ ನಡೆಸಿ ವಿಜಯಪುರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ನಗರದ ವಾರ್ಡ್ ನಂ 4ರ ವ್ಯಾಪ್ತಿಯಲ್ಲಿ ಬರುವ ಸೇವಾಲಾಲ ನಗರ ತಾಂಡಾದಿಂದ ಮುಖ್ಯ ರಸ್ತೆಗೆ ಬರಲು ರಸ್ತೆ ಇರುವುದಿಲ್ಲ. ಈ ತಾಂಡಾ ಸ.ನಂ 136 ರಲ್ಲಿ ಇದ್ದು ಸುಮಾರು 60 ವರ್ಷದಿಂದ ತಾಂಡಾದಲ್ಲಿ ಬಂಜಾರಾ ಸಮಾಜದ ಜನರು ವಾಸಿಸುತ್ತಿದ್ದಾರೆ. ತಾಂಡಾದ ರಸ್ತೆಗಾಗಿ ಸಾಕಷ್ಟು ಸಲ ಮನವಿ ಸಲ್ಲಿಸಿದರೂ ಪ್ರಯೋಜನೆ ಆಗಿರುವುದಿಲ್ಲ. ತಾಂಡಾದಲ್ಲಿ ಸುಮಾರು 2400 ಜನರು ವಾಸವಿದ್ದು 2000 ಮತದಾರರು ಇರುತ್ತಾರೆ. ತಾಂಡಾದಲ್ಲಿ 400 ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳು ಬಸ್ಸಿನ ವ್ಯವಸ್ಥೆ ಕೂಡಾ ಇರುವದಿಲ್ಲ. ರಸ್ತೆಯ ಸೌಲಭ್ಯ ಇರುವದಿಲ್ಲ.

ಈ ಸರ್ವೇ ನಂ 136 ಕ್ಕೆ ಸಂಬಂಧಿಸಿದಂತೆ ನಿರ್ಮಿಸಿದ ರಸ್ತೆ ನಕ್ಷೆಯಲ್ಲಿ ಇರುತ್ತದೆ. ವಿಜಯಪುರ ನಗರದಲ್ಲಿ ತಾಂಡಾ ಇದ್ದರೂ ಸ್ವಂತಂತ್ರ ಭಾರತದಲ್ಲಿ 60 ವರ್ಷದಿಂದ ತೊಂದರೆ ಅನುಭವಿಸುತ್ತಿರುವ ತಾಂಡಾದ ನಿವಾಸಿಗಳಿಗೆ ದಿನನಿತ್ಯ ತೊಂದರೆ ಅನುಭವಿಸಬೇಕಾಗಿದೆ ಎಂದು ಪ್ರತಿಭಟನೆಕಾರರು ತಮ್ಮ ಅಳಲು ತೋಡಿಕೊಂಡರು.

ಈ ತಾಂಡಾದ ರಸ್ತೆ ಬಗ್ಗೆ ಚೂನಾಯಿತ ಪ್ರತಿನಿಧಿಗಳಿಗೆ ಸಾಕಷ್ಟು ಸಲ ಹೇಳಿದರೂ ಯಾವುದೇ ಪ್ರಯೋಜನವಾಗಿಲ್ಲ. ಕಾರಣ ನಮ್ಮ ತಾಂಡಾಕ್ಕೆ ಹೊಂದಿಕೊಂಡಿರುವ ಭೂತನಾಳ ಗ್ರಾಮದ ಜಮೀನು ಸರ್ವೇ ನಂ 106 ಕ /1.2.3.4 ಒಟ್ಟು 1 ಎಕರೆ ಜಮೀನು ಭೂಪರಿವರ್ತನೆ ಮಾಡಿಸಿಕೊಂಡಿದ್ದು ಅದರಲ್ಲಿ ಮುಖ್ಯ ರಸ್ತೆಗಾಗಿ ವಿಜಯಪುರ– ನಗರಾಭಿವೃದ್ಧಿ ಪ್ರಾಧಿಕಾರದ ನಕ್ಷೆ ಅನುಮೋದನೆಯಲ್ಲಿ 9 ಮಿಟರ ರಸ್ತೆ ಇರುತ್ತದೆ. ಈ ತಾಂಡಾದಲ್ಲಿ ರಸ್ತೆ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಿ ತಾಂಡಾದ ಹಾಗೂ ಇತರೆ ಜನಾಂಗಕ್ಕೆ ಅನುಕೂಲ ಮಾಡಿಕೊಡುವಂತೆ ಒತ್ತಾಯಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ ಪರಮೇಶ್ವರ ಚವ್ಹಾಣ, ಗೋಪಾಲ ಮಹಾರಾಜ, ಸಂಜು ಮಹಾರಾಜ, ಧನಸಿಂಗ್ ಮಹಾರಾಜ, ರವಿ ರಾಥೋಡ, ನಾಯಕ್ ಡಾವ, ಪರಮೇಶ್ವರ ನಾಯ್ಕ, ರಾಜು ಖಂಡಸಾಲಿ, ಚಂದ್ರಶೇಖ ರಾಠೋಡ, ರಮೇಶ ನಾಯ್ಕ, ಹೀರು ರಾಠೋಡ, ರವಿ ಲಮಾಣಿ, ಮಹಾದೇವ ರಾಠೋಡ, ತಾನಾಜಿ ಕಾರಬಾರಿ, ಮಹೇಶ ಮಾನೆ, ಸುನೀತಾ ಅನಿತಾ, ಜಯಶ್ರೀ, ರಮೇಶ, ಸುರೇಶ, ಅಶೋಕ, ಬಾಬು ಇತರರು ಇದ್ದರು.

# ಆರ್‌ಪಿಐಯ್ ಅಧ್ಯಕ್ಷ ನಾಗೇಶ ತಳಕೇರಿಗೆ ಗೌರವ ಡಾಕ್ಟರೇಟ್ ಪದವಿ

**ಇಂಡಿ:** ಇಂಟರನ್ಯಾಷನಲ್ ಹ್ಯೂಮನ್ ಡೆವಲಪ್ಮೆಂಟ್ ಕೌನ್ಸಿಲ್ ಇಂಟೆರ್ ನ್ಯಾಷನಲ್ ಅಕ್ರೆಡಿಟೇಶನ್ ಆರ್ಗ್‌ನೆಷನ್ (ಯು ಎಸ್ ಎ) ಕೆ ಓ ಎಲ್– ಎಸ್ 267– 2015–16ರ ಭಾರತ ಸರಕಾರದಡಿ ನೋಂದಣಿ ಹೊಂದಿರುವ ಸಂಸ್ಥೆ ವತಿಯಿಂದ ಆರ್ ಪಿ ಅಯ್ ತಾಲೂಕ ಅಧ್ಯಕ್ಷ ಹಾಗೂ ಬೆಳಗಾವಿ ವಲಯ ವಿಭಾಗೀಯ ಅಧ್ಯಕ್ಷ ಶ್ರೀ ನಾಗೇಶ ತಳಕೇರಿ ಅವರ ಸಮಾಜ ಸೇವೆಯನ್ನು ಗುರುತಿಸಿ ಗೌರವ ಡಾಕ್ಟರೆಟ್ ಪದವಿಯನ್ನು ನೀಡಿ ಮುಂಬೈಯಲ್ಲಿನ ದಿ ಮೈಸೂರ್ ಅಶೋಷಿಯಶನ್ ಬಾಂಬೆ

393 ಬಾಹು ದಾಜಿ ರೋಡ ಮಾತಾಂಗಾ ಮುಂಬೈ



ಯಲ್ಲಿ ಆಯೋಜಿಸಿದ ಗೌರವ ಡಾಕ್ಟರೇಟ್ ಪ್ರಶಸ್ತಿ ವಿತರಣಾ ಸಮಾರಂಭದ ವೇದಿಕೆಯಲ್ಲಿ ನಿನ್ನೆ ದಿನಾಂಕ 24/08/2025ರಂದು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದರು. ಅವರ ಅಭಿಮಾನಿಗಳು, ಕಾರ್ಯಕರತರು,ಗ್ರಾಮಸ್ಥರುಹರ್ಷವ್ಯಕ್ತಪಡಿಸಿದರು.

# ಪರೀಕ್ಷೆಗಳಿಗೆ ಭಯ ಬೇಡ, ಸಿದ್ಧತೆ ಇರಲಿ: ಡಿಸಿ ಡಾ. ಆನಂದ

**ವಿಜಯಪುರ :** ನಿರಂತರ ಓದಿನಲ್ಲಿ ಯಶಸ್ಸಿನ ಗುಟ್ಟು ಅಡಗಿದೆ. ವಿದ್ಯಾರ್ಥಿಗಳು ಏಕಾಗ್ರತೆಯಿಂದ ಓದುವ ಮೂಲಕ ಗುರಿ ಸಾಧನೆಯಡೆಗೆ ಸಾಗುವುದರೊಂದಿಗೆ ಸತತ ಅಧ್ಯಯನ ಪರಿಶ್ರಮದ ಮೂಲಕ ಗುರಿ ತಲುಪಬಹುದಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಹೇಳಿದರು.

ಭಾನುವಾರ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಸಮಾಜ ಕಲ್ಯಾಣ ಇಲಾಖೆ ಹಾಗೂ ದಲಿತ ವಿದ್ಯಾರ್ಥಿ ಪರಿಷತ್ ಇವರ ಸಹಯೋಗದೊಂದಿಗೆ ಹಮ್ಮಿಕೊಂಡ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ವಿಷಯದ ಕುರಿತಾಗು ನಡೆದ ಒಂದು ದಿನದ ಕಾರ್ಯಾಗಾರಕ್ಕೆಚಾಲನೆನೀಡಿಮಾತನಾಡಿದ ಅವರು,ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಧೈರ್ಯದಿಂದ ಎದುರಿಸಬೇಕು.ಅದರಲ್ಲೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ನಿರಂತರ ಓದು ಅಗತ್ಯ ಎಂಬುದನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು.

ಸ್ಪರ್ಧಾತ್ಮಕ ಪರೀಕ್ಷೆಗಳಾದ ಕೆಎಎಸ್, ಐಎಎಸ್‌ನಂತಹ ಪರೀಕ್ಷೆಗಳ ಪಠ್ಯ ಸಂಗ್ರಹಿಸಿಕೊಂಡು ಹಾಗೂ ಸರಿಯಾಗಿ ಗ್ರಹಿಸಿಕೊಂಡು ಅಭ್ಯಸಿಸಬೇಕು. ಯಾವುದೇ



ಕಾರಣಕ್ಕೂ ಪರೀಕ್ಷೆಗಳಿಗೆ ಭಯ ಪಡದೆ, ಓದಿರುವ ವಿಷಯವನ್ನು ಅರ್ಥೈಸಿಕೊಂಡು ಟಿಪ್ಪಣಿ ಮಾಡಿಟ್ಟುಕೊಳ್ಳಬೇಕು. ಪುನಃ ಅದೇ ವಿಷಯದ ಅಧ್ಯಯನ ಮಾಡಿದಾಗ ಈ ಹಿಂದೆ ಓದಿದ ವಿಷಯ ಬಗ್ಗೆ ಮನನವಾಗಲಿದೆ. ಓದಿದ ವಿಷಯವನ್ನು ವಿನಿಮಯ ಮಾಡಿಕೊಂಡಾಗ ವಿಷಯದ ಕುರಿತು ಜ್ಞಾನದ ಹರವು ವಿಸ್ತಾರಗೊಳ್ಳಲಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಿಷಿ ಆನಂದ ಅವರು ಮಾತನಾಡಿ, ಈ ರೀತಿಯ ಕಾರ್ಯಾಗಾರಗಳು ವಿದ್ಯಾರ್ಥಿಗಳ ಭವಿಷ್ಯ ರೂಪಿಸಿಕೊಳ್ಳಲು ಪೂರಕವಾಗಿ ಸಹಾಯಕವಾಗಿವೆ. ಈ ದಿಸೆಯಲ್ಲಿ ವಿದ್ಯಾರ್ಥಿಗಳು ಕಾಲೇಜು,ವಿವಿಧ ವಸತಿ ನಿಲಯಗಳಲ್ಲಿನ ಗ್ರಂಥಾಲಯಗಳ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು ಮಾತನಾಡಿ, ಜೀವನದಲ್ಲಿ ಸಾಧನೆ ಮಾಡುವ ಛಲದೊಂದಿಗೆ ಅಧ್ಯನಶೀಲತೆ ರೂಢಿಸಿಕೊಳ್ಳಬೇಕು. ಆ ನಿಟ್ಟಿನಲ್ಲಿ ಪ್ರತಿನಿತ್ಯ ಅಧ್ಯಯನಕ್ಕೆಗೊಳ್ಳಬೇಕು. ಆಯ್ಕೆಯ ವಿಷಯ ಕರಗತಗೊಂಡು ಸ್ಪರ್ಧಾತ್ಮಕ ಪರೀಕ್ಷೆಯನ್ನು ಅತ್ಯಂತ ಸಮರ್ಥವಾಗಿ ಎದುರಿಸಬಹುದಾಗಿದೆ. ಸಾಧಕರ ಪ್ರೇರಣೆಯಾಗಿಟ್ಟುಕೊಂಡು ನಿರಂತರ ಅಧ್ಯಯನ ಮಾಡಬೇಕು. ವಿಷಯಗಳ ಸಮಗ್ರವಾಗಿ ಅರಿತುಕೊಂಡು ಪರೀಕ್ಷೆಗಳನ್ನು ಎದುರಿಸಲು ಸನ್ನದ್ಧರಾಗಬೇಕು ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಕೆಎಎಸ್, ಐಎಎಸ್ ಪರೀಕ್ಷೆಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ ನಡೆಯಿತು.

ಎಸ್ ಡಿ ವಿಜರ್ಡ್‌ನ ಸಂಸ್ಥಾಪಕ ಅಧ್ಯಕ್ಷ ಶರಣಯ್ಯ ಭಂಡಾರಿಮಠ ಅವರು ಸ್ಪರ್ಧಾತ್ಮಕ ಪರೀಕ್ಷಾ ಸಿದ್ಧತೆಯ ಕುರಿತಾಗಿ ಸಮಗ್ರ ವಿಷಯ ತಿಳಿಸಿಕೊಟ್ಟರು.

ವಿದ್ಯಾರ್ಥಿ ಪರಿಷತ್ ನ ರಾಜ್ಯಾಧ್ಯಕ್ಷ ಶ್ರೀನಾಥ ಪೂಜಾರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೋತದಾರ ಸ್ವಾಗತಿಸಿದರು.

ಬಿ.ಜೆ. ಇಂಡಿ, ಉಮೇಶ ಲಮಾಣಿ, ಮಂಜು ಹಿರೇಮನಿ, ಅರವಿಂದ ಲಂಬು, ಸದಾನಂದ ಬಡಿಗೇರ, ಮಾದೇಶ ಹಾಗೂ ವಿದ್ಯಾರ್ಥಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಜೀವನದಲ್ಲಿ ಗುರಿ ಮುಖ್ಯ: ಸಾಧನೆಗೆ ಪರಿಶ್ರಮ ಅಗತ್ಯ: ಶಂಕರಗೌಡ ಸೋಮನಾಳ

**ವಿಜಯಪುರ :** ಜೀವನದಲ್ಲಿ ಗುರಿ ಮುಖ್ಯ. ನಿಗದಿಪಡಿಸಿಕೊಂಡ ಗುರಿಯೊಂದಿಗೆ ತಮ್ಮ ಕನಸನ್ನು ನನಸಾಗಿಸಿಕೊಳ್ಳಲು ಪರಿಶ್ರಮ ಅಗತ್ಯ ಎಂದು ಮಹಿಳಾ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಶಂಕರಗೌಡ ಸೋಮನಾಳ ಅವರು ಹೇಳಿದರು.ಸೋಮವಾರ ಪರ್ಲ್ಸ್ ಕ್ಯಾಂಪಸ್‌ನಲ್ಲಿರುವ

ಸರಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರ ಸಹಯೋಗದೊಂದಿಗೆ ಪರಿಶಿಷ್ಟ ಪಂಗಡ ಉಪಯೋಜನೆಯಡಿ

ಶಾಲಾ ವಿದ್ಯಾರ್ಥಿನಿಯರಿಗೆ ಆರು ತಿಂಗಳ ಕಾಲ ನೃತ್ಯಕಲಾ ತರಬೇತಿ ಶಿಬಿರದ ಕಾರ್ಯಕ್ರಮಕ್ಕೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು. ಎಲ್ಲರಲ್ಲೂ ಅಗಾಧವಾದ ಶಕ್ತಿ ಇದೆ. ಸತತ ಅಧ್ಯಯನಶೀಲತೆ ಬೆಳೆಸಿಕೊಳ್ಳಬೇಕು. ಮಹಿಳೆ ಇಂದು ಎಲ್ಲ ಕ್ಷೇತ್ರಗಳಲ್ಲೂ ಮುಂದಿದ್ದಾರೆ. ಈ ವಸತಿ ನಿಲಯದಿಂದ



ಪ್ರತಿಭೆಗಳು ಹೊರಹೊಮ್ಮಿ ಕೀರ್ತಿ ತರುವಂತಾಗಿ,ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅನೇಕ ಸಮಸ್ಯೆಗಳನ್ನು ನೀಗಿಸಿಕೊಂಡು ಸಾಧನೆ ಮಾಡಬೇಕು. ದಿನ ಪತ್ರಿಕೆಗಳನ್ನು ಪ್ರತಿನಿತ್ಯ ಓದುವುದನ್ನು ರೂಢಿಸಿಕೊಳ್ಳಬೇಕು. ಜೀವನದಲ್ಲಿ ವಿವಿಧ ಉನ್ನತ ಹುದ್ದೆ ಹೊಂದಿ ಈ ವಸತಿ ನಿಲಯ ಜಿಲ್ಲೆಯ ಕೀರ್ತಿ ತರುವಂತಾಗಲಿ ಎಂದು ಆಶಿಸಿದರು.ನಮ್ಮ, ಕಲೆ,ಸಂಸ್ಕೃತಿ, ಇತಿಹಾಸವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಮೂಲಕ ವಿದ್ಯಾರ್ಥಿನಿಯರಿಗೆ ನೃತ್ಯ ತರಬೇತಿಯನ್ನು ಆಯೋಜಿಸಲಾಗಿದೆ. ಈ ತರಬೇತಿಯನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.ಕ್ರೀಡಾಧಿಕಾರಿ ರಾಜಶೇಖರ ದೈವಾಡಿ ಮಾತನಾಡಿ, ಸರ್ಕಾರ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಅನೇಕ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದು,

ವಿದ್ಯಾರ್ಥಿ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಯಲ್ಲಿ ಭಾಗವಹಿಸಬೇಕು. ನೃತ್ಯ ರೂಪಕ ಸೇರಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಉಪ ಆಯುಕ್ತ ಮಹಾವೀರ ಬೋರಣ್ಣವರ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ,ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಬಿ.ಜೆ ಇಂಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಂತೋಷ ಭೋವಿ,ವಾರ್ತಾಧಿಕಾರಿ ಅಮರೇಶ ದೊಡಮನಿ, ವಸತಿ ನಿಲಯದ ಮೇಲ್ವಿಚಾಕಿ ಎಸ್.ಎನ್. ಅಗಸಿಮುಂದಿನ, ತರಬೇತಿ ಗುರುಗಳಾದ ರೋಹಿಣಿ ತಳವಾರ,ಸುಭಾಷ್ಚಂದ್ರ ಕನ್ನೂರ ಇದ್ದರು.

# ಜೈನಧರ್ಮದ ಕೊಡುಗೆ ದೇಶಕ್ಕೆ ಅಪಾರ: ಸಚಿವ ಜಾರಕಿಹೊಳಿ

**ಜಮಖಂಡಿ :** ಜೈನ ಧರ್ಮ ವ್ಯಾಪಾರ, ಉದ್ಯೋಗ,ಕೃಷಿ,ಶೈಕ್ಷಣಿಕಕ್ಷೇತ್ರದಲ್ಲಿಸಮಾಜಕ್ಕೆ, ದೇಶಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದೆ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ನಗರದ ಬಿ.ಎಲ್.ಡಿ.ಇ. ಶಿಕ್ಷಣ ಸಂಸ್ಥೆಯ ಮೈದಾನದಲ್ಲಿ ದಕ್ಷಿಣ ಭಾರತ ಜೈನ ಸಭಾ ವೀರ ಸೇವಾದಳ ಮಧ್ಯವರ್ತಿ ಸಮಿತಿ ಮತ್ತು ತಾಲೂಕಾ ಜೈನ ಸಮಾಜದ ಸಹಯೋಗದಲ್ಲಿ ಸೋಮವಾರ ದಿವಂಗತ ರಾವಸಾಹೇಬ ಪಾಟೀಲ ಬೋರಗಾಂವಕರ ವೇದಿಕೆಯಲ್ಲಿ ಪ್ರಥಮಾಚಾರ್ಯ ಪ.ಪೂ. 108 ಶಾಂತಿಸಾಗರ ಮಹಾರಾಜರ ಎಪ್ಪತ್ತನೇ ಪುಣ್ಯತಿಥಿ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಜೈನಧರ್ಮ ವಿಶ್ವಕ್ಕೆ ಶಾಂತಿ, ಅಹಿಂಸೆಯನ್ನು ಸಾರುತ್ತ ಸಮಾಜದ ಒಳಿತಿಗೆ ಕಾರ್ಯ ನಿರ್ವಹಿಸುತ್ತ ಬಂದಿದೆ. ಹೊರ ರಾಜ್ಯಗಳಲ್ಲಿ ಕನ್ನಡವನ್ನು ಉಳಿಸಿ ಬೆಳೆಸುತ್ತಾ ಬಂದಿದೆ. ಎಲ್ಲರನ್ನು ಪ್ರೀತಿಸುವ, ಗೌರವಿಸುವ ಸಮಾಜವಾಗಿ ಗುರುತಿಸಿಕೊಂಡಿದೆ ಎಂದರು.

ಯೋಜನಾ ಮತ್ತು ಸಾಂಖಿಕ ಸಚಿವ ಡಿ. ಸುಧಾಕರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಜೈನಧರ್ಮ ಅಹಿಂಸೆಯನ್ನು ಸಾರಿದ್ದು, ಅದರಂತೆ ನಡೆದುಕೊಂಡಿದೆ. ಮಹಾತ್ಮಾ ಗಾಂಧಿಜೀಯವರು ಅಹಿಂಸಾ ಮಾರ್ಗದಿಂದ ಸ್ವಾತಂತ್ರ್ಯ ಪಡೆಯಲು ಪ್ರೇರಣೆ ನೀಡಿದೆ. ಶಾಂತಿಸಾಗರ ಭಟ್ಟಾಚಾರ್ಯರು ಜೈನ ಸಮುದಾಯಕ್ಕೆ ಆದರ್ಶರಾಗಿದ್ದಾರೆ. ಗುರುವಿನ ಪ್ರೇರಣೆಯಲ್ಲಿ ನಾವೆಲ್ಲರೂ ಜೀವನ ಸಾಗಿಸಬೇಕೆಂದರು.

ಸಕ್ಕರೆ ಮತ್ತು ಎಪಿಎಂಸಿ ಸಚಿವ ಶಿವಾನಂದ ಪಾಟೀಲ ಮಾತನಾಡಿ, ಜೈನ ಧರ್ಮದಿಂದ ಪ್ರಕೃತಿ ಉಳಿದಿದೆ. ಅಹಿಂಸೆಯ ಮಾರ್ಗದಿಂದ ಎಲ್ಲಪ್ರಾಣಿಪಕ್ಷಿಗಳಲ್ಲಿದಯೆಯೇಧರ್ಮಎಂದು ಹೇಳಿದೆ. ಜೈನ ಧರ್ಮದ ಐದು ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ ವಿಶ್ವವೇ ಸುಂದರ ತೋಟದಂತೆ ಕಂಗೊಳಿಸುತ್ತದೆ. ಸಾಮಾಜಿಕ ಮೌಲ್ಯಗಳನ್ನು ನೀಡುವ ಮೂಲಕ ಅದರಂತೆ ನಡೆದುಕೊಂಡಿದೆ. ಜೈನ ಧರ್ಮಕ್ಕೆ ಪ್ರತ್ಯೇಕ ನಿಗಮ ಮಂಡಲಿ ಸ್ಥಾಪಿಸಲು ಮನವಿ ಸಲ್ಲಿಸಿದ್ದು, ಸದರಿ ವಿಷಯವನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ ಎಂದರು.



ಅಥಣಿ ಶಾಸಕ ಲಕ್ಷ್ಮಣ ಸವದಿ ಮಾತನಾಡಿ, ಜೈನ ಧರ್ಮ ನಶಿಸಿ ಹೋದ ಸಂದರ್ಭದಲ್ಲಿ ಶಾಂತಿಸಾಗರ ಮಹಾರಾಜರು ಪುನರುತ್ಥಾನ ಮಾಡಿದರು. ತತ್ವ ಸಿದ್ಧಾಂತಗಳನ್ನು ಅವುಗಳ ಹಿರಿಮೆಯನ್ನು ಸಾರಿದರು. ಕಠಿಣ ತಪಸ್ಸು ಪರಿಶ್ರಮದಿಂದ ಆತ್ಮೋದ್ಧಾರದ ಮಾರ್ಗವನ್ನು ತೋರಿಸಿಕೊಟ್ಟರು. ಜೈನ ಸಮಾಜದ ನ್ಯಾಯಯುತ ಬೇಡಿಕೆಗಳ ಈಡೇ–ರಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

ತೇರದಾಳ ಶಾಸಕ ಸಿದ್ದು ಸವದಿ ಮಾತನಾಡಿ, ಧರ್ಮಸ್ಥಳದ ವಿರುದ್ಧ ಸಂಚು ರೂಪಿಸಿ ಧರ್ಮಾಧಿಕಾರಿಗಳ ಹೆಸರು ಕೆಡಿಸಲು ಯತ್ನಿಸಿದವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.

ನಕಲಿ ಯುಟ್ಯೂಬರಗಳನ್ನು ಬಂಧಿಸಬೇಕು. ಅಲ್ಪಸಂಖ್ಯಾತರ ನಿಗಮದಲ್ಲಿ ಮುಸ್ಲಿಂ, ಸಿಖ್, ಪಾರಸಿ, ಜೈನ ಹೀಗೆ ಐದು ಸಮುದಾಯಗಳಿದ್ದು ಜೈನ ಧರ್ಮಕ್ಕೆ ಹೆಚ್ಚಿನ ಅನುದಾನ ಬರುತ್ತಿಲ್ಲ. ಆದ್ದರಿಂದ ಪ್ರತ್ಯೇಕ ನಿಗಮ ರಚಿಸಲು ಸರ್ಕಾರ ಮುಂದಾಗಬೇಕು. ಸಮಾಜದ ವಿರುದ್ಧ ಷಡ್ಯಂತ್ರಗಳು ನಡೆದಾಗ ಧ್ವನಿ ಎತ್ತುವ ಕೆಲಸವಾಗಬೇಕು ಎಂದರು.

ಮಾಜಿ ಸಚಿವ ಮುರುಗೇಶ ನಿರಾಣಿ ಮಾತನಾಡಿದರು. ಬೀಳಗಿ ಶಾಸಕ ಜೆ. ಟಿ. ಪಾಟೀಲ,ಶಾಸಕಜಗದೀಶಗುಡಗುಂಟಿ,ಮಾಜಿ ಶಾಸಕ ಆನಂದ ನ್ಯಾಮಗೌಡ ಮಾತನಾಡಿದರು. ಓಲೇಮಠದ ಆನಂದ ದೇವರು ಆಶೀರ್ವಚನ ನೀಡಿದರು. ನಾಂದಣಿ ಸಂಸ್ಥಾನ ಮಠದ ಜಿನಸೇನಾ ಭಟ್ಟಾರಕ ಪಟ್ಟಾಚಾರ್ಯರು, ವರೂರು ನವಗ್ರಹ ತೀರ್ಥದ ಧರ್ಮಸೇನಾ ಭಟ್ಟಾರಕರು. ಸೋಂದಾಮಠದ ಭಟ್ಟಾರಕ ಸ್ವಾಮಿಗಳು, ಕೊಲ್ಹಾಪುರದ ಲಕ್ಷ್ಮಿ ಸೇನಾ ಭಟ್ಟಾರಕ ಸ್ವಾಮಿಗಳು ಸಾನಿಧ್ಯ ವಹಿಸಿದ್ದರು.

ವೇದಿಕೆಯಲ್ಲಿ ಸದಲಗಾ ಶಾಸಕ ಗಣೇಶ ಹುಕ್ಕೇರಿ, ಮಾಜಿ ಸಚಿವ ವೀರಕುಮಾರ ಪಾಟೀಲ, ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ, ಜಿ. ಎಸ್. ನ್ಯಾಮಗೌಡ, ಬೆಳಗಾವಿ ಶಾಸಕ ಅಭಯ ಪಾಟೀಲ, ಮಾಜಿ ಸಚಿವ ಎಸ್. ಆರ್. ಪಾಟೀಲ,ನಗರಸಭೆಅಧ್ಯಕ್ಷಈಶ್ವರವಾಳೆಣ್ಣವರ, ಸಹಕಾರ ರತ್ನ ಉತ್ತಮ ಪಾಟೀಲ, ಬಿ. ಎಸ್. ಸಿಂಧೂರ, ವೀರ ಸೇವಾದಳ ಸಮಿತಿಯ ಅಧ್ಯಕ್ಷ ಬಾಲಚಂದ್ರ ಪಾಟೀಲ, ವಿಜಯ ಪಾಟೀಲ, ಅಭಿನಂದನ ಪಾಟೀಲ, ರಾವ್ ಸಾಬ ಪಾಟೀಲ, ಜೈನ ಸಮಾಜದ ಮುಖಂಡರು ಸಹಿತ ಇನ್ನೂ ಹಲವರು ಉಪಸ್ಥಿತರಿದ್ದರು.

ಭಾವನಾ ಬೆಳಗಲಿ ಪ್ರಾರ್ಥಿಸಿದರು. ಬಾಹುಬಲಿ ಉಪಾಧ್ಯೆ ಶಾಂತಿಮಂತ್ರ ಪಠಿಸಿದರು. ಅರುಣಕುಮಾರ ಎಂ. ಶಹಾ ಸ್ವಾಗತಿಸಿದರು. ಅಜಿತಕುಮಾರ ಭಂಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂದೀಪ ಬೆಳಗಲಿ ನಿರೂಪಿಸಿದರು. ವರ್ಧಮಾನ ನ್ಯಾಮಗೌಡ ವಂದಿಸಿದರು.

## ಜೈನ ಸಮಾರಂಭದ ವೇದಿಕೆಯಲ್ಲಿ ಶಾಸಕ–ಸಚಿವರ ಮಾತಿನ ಚಕಮಕಿ

**ಜಮಖಂಡಿ:** ನಗರದ ಬಿ.ಎಲ್.ಡಿ.ಇ.ಶಿಕ್ಷಣ ಸಂಸ್ಥೆಯ ಮೈದಾನದಲ್ಲಿ ದಕ್ಷಿಣ ಭಾರತ ಜೈನ ಸಭಾ ವೀರ ಸೇವಾದಳ ಮಧ್ಯವರ್ತಿ ಸಮೀತಿ ಮತ್ತು ತಾಲೂಕಾ ಜೈನ ಸಮಾಜದ ಸಹಯೋಗದಲ್ಲಿ ದಿವಂಗತ ರಾವಸಾಹೇಬ ಪಾಟೀಲ ಬೋರಗಾಂವಕರ ವೇದಿಕೆಯಲ್ಲಿ ಸೋಮವಾರ ಪ್ರಥಮಾಚಾರ್ಯ ಪ.ಪೂ. 108 ಶಾಂತಿಸಾಗರ ಮಹಾರಾಜರ ಎಪ್ಪತ್ತನೇ ಪುಣ್ಯತಿಥಿ ಸಮಾರಂಭದ ವೇದಿಕೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷದ ಶಾಸಕ–ಸಚಿವರ ಮಧ್ಯೆ ಮಾತಿನ ಸಮರ ನಡೆಯಿತು. ಅಥಣಿ ಶಾಸಕ ಲಕ್ಷ್ಮಣ ಸವದಿ ಸಮಾರಂಭದಲ್ಲಿ ಮಾತನಾಡುತ್ತಾ, ಹಿಂದಿನ ಪ್ರಧಾನ ಮಂತ್ರಿ ಇಂದಿರಾ ಗಾಂಧಿ ಅವರು ಅಥಣಿ ತಾಲೂಕಿನ ಶೇಡಬಾಳಗ್ರಾಮದಲ್ಲಿಜನಿಸಿದವಿದ್ಯಾರಣ್ಯಜೈನಮುನಿ ಮಹಾರಾಜರ ದಶ9ನ ಪಡೆಯಲು ಹೋದಾಗ, ಕಾಂಗ್ರೆಸ್ ಪಕ್ಷಕ್ಕೆ ಹಸ್ತದ ಚಿನ್ಹೆಯನ್ನು ಬಳಸಲು ತಿಳಿಸಿದ್ದರು. ಅಂದಿನಿಂದ ಕಾಂಗ್ರೆಸ್ಸಿನ ಚುನಾವಣೆ ಚಿಹ್ನೆ ಗುರುತು ಹಸ್ತವಾಯಿತು. ಇಂದಿರಾಗಾಂಧಿ ಅವರು ಕಾಂಗ್ರೆಸ್ ಪಕ್ಷಕ್ಕೆ ಹಸ್ತದ ಚಿಹ್ನೆಯನ್ನು ಅಧಿಕೃತಗೊಳಿಸಿದರು. ಧರ್ಮಸ್ಥಳದ ವಿಚಾರವಾಗಿ ಸರ್ಕಾರ ಕಠಿಣ ನಿರ್ಧಾರಗಳನ್ನು ತೆಗೆದುಕೊಂಡು ಧಾರ್ಮಿಕ ಭಾವನೆಗೆ ಧಕ್ಕೆ ತರುವವರ ವಿರುದ್ಧ ಕ್ರಮ ಜರುಗಿಸಲಿದೆ. ಯಾವುದೇ ಮುಲಾಜಿಲ್ಲದೇ ತಪ್ಪಿಸ್ಥರನ್ನು ಬಂಧಿಸಲಿದೆ ಎಂದರು.

ವೇದಿಕೆಯಲ್ಲಿ ಅಥಣಿ ಶಾಸಕ ಲಕ್ಷ್ಮಣ ಸವದಿ ಮಾತಿಗೆ ತೇರದಾಳ ಬಿಜೆಪಿ ಶಾಸಕ ಸಿದ್ದು ಸವದಿ ಮಾತನಾಡಿ, ಚುನಾವಣೆಗೆ ಸ್ಪರ್ಧಿಸುವ ಸಲುವಾಗಿ ಹಸ್ತದ ಗುರುತನ್ನು ಜೈನಮುನಿಗಳು ನೀಡಿದರೆ, ಬಿಜೆಪಿಯ ಕಮಲದ ಚಿಹ್ನೆ ಕೂಡ ಜೈನ ಮುನಿಗಳು ನೀಡಿದ್ದಾರೆ. ಸಾರ್ವಜನಿಕ ವೇದಿಕೆಯಲ್ಲಿ ಪಕ್ಷದ ಮಾತುಗಳನ್ನು ಹೇಳಿಕೊಳ್ಳುವ ಅವಶ್ಯಕತೆ ಇರಲಿಲ್ಲ. ಯಾಕೆ ಈ ರೀತಿ ಮಾತನಾಡುವರೊ ಎಂದರು. ಧರ್ಮಸ್ಥಳದ ಹೆಸರು ಕೆಡಿಸುವ ಹುನ್ನಾರಕ್ಕೆ ಅಂತ್ಯ ಹಾಡ ಬೇಕಾಗಿದೆ. ಯಾರ ಒತ್ತಡಕ್ಕೆಮಣಿದುಕಾಂಗ್ರೆಸ್ಸರಕಾರಎಸ್.ಐ.ಟಿ.ರಚನೆ ಮಾಡಿದೆ ಎಂಬುವುದನ್ನು ಬಹಿರಂಗಗೊಳ್ಳಬೇಕು. ಭೂಮಿ ಮೇಲೆ ಯಾವುದೂ ಶಾಶ್ವತವಲ್ಲ. ಪಕ್ಷಗಳು, ರಾಜಕೀಯ ವ್ಯವಸ್ಥೆ ಶಾಶ್ವತವಾಗಿ ಉಳಿಯುವದಿಲ್ಲ. ಆದರೆ ಧರ್ಮ ಶಾಶ್ವತವಾಗಿ ಉಳಿಯಲಿದೆ. ಧರ್ಮಕ್ಕೆ ಚ್ಯುತಿ ಬಂದಾಗ ಎಚ್ಚರಿಸುವ ಕೆಲಸವನ್ನು ಸಮಾಜಗಳು ಮಾಡಬೇಕು. ಸರಕಾರ ಗೋ ಹತ್ಯೆ ನಿಷೇಧ ಕಾಯ್ದೆಯನ್ನು ಗಾಳಿಗೆ ತೂರಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಧ್ಯಪ್ರವೇಶಿಸಿದ ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ವೇದಿಕೆಯಲ್ಲಿ ಕೇಂದ್ರದ ಬಿಜೆಪಿ ಸರಕಾರ ದನದ ಮಾಂಸ ರಫ್ತು ಮಾಡುವಲ್ಲಿ ವಿಶ್ವದಲ್ಲಿ ಭಾರತ ದೇಶ ಎರಡನೇಯ ಸ್ಥಾನದಲ್ಲಿದೆ. ಧರ್ಮಸ್ಥಳ ವಿಷಯವಾಗಿ ನಾವು ಎಸ್.ಐ.ಟಿ. ರಚನೆ ಮಾಡಿಲ್ಲ. ನ್ಯಾಯಾಲಯದ ಆದೇಶದ ಮೇರೆಗೆ ಎಸ್.ಐ.ಟಿ. ರಚನೆ ಮಾಡಲಾಗಿದೆ. ಸಮುದಾಯಗಳ ಸಮಾರಂಭದಲ್ಲಿ ಮನಸ್ಸು ಒಡೆಯುವ ಕೆಲಸ ಮಾಡಬಾರದು. ಇದು ರಾಜಕೀಯ ಪ್ರತಿನಿಧಿಗಳಿಗೆ ಶೋಭೆ ತರುವುದಿಲ್ಲ ಎಂದು ಪರೋಕ್ಷವಾಗಿ ಟಾಂಗ್ ನೀಡುವ ಮೂಲಕ ಸ್ಪಷ್ಟೀಕರಣ ನೀಡಿದರು.

## ವರ್ತಮಾನ ಮತ್ತು ಭವಿಷ್ಯದ ಸಮಸ್ಯೆಗಳನ್ನು ಎದುರಿಸುವ ಶಿಕ್ಷಣ ಪದ್ಧತಿ ನಿರ್ಮಿಸಿ

**ಬನಹಟ್ಟಿ :** ಅಧ್ಯಯನ, ಗಳಿಕೆ ಮತ್ತು ನಾವು ಗಳಿಸಿದ ಸಂಪತ್ತನ್ನು ಸಮಾಜಕ್ಕಾಗಿ ವಿನಿಯೋಗಿಸಬೇಕು.

ಇಂದು ನಾವು ಜ್ಞಾನವಂತರನ್ನು ಗೌರವಿಸಬೇಕು. ಅವರಿಗೆ ಸೌಲಭ್ಯಗಳು ದೊರೆಯುವಂತಾಗಬೇಕು. ಇಂದಿನ ಮತ್ತು ಭವಿಷ್ಯತ್ತಿನ ಸಮಸ್ಯೆಗಳನ್ನು ಎದು–ರಿಸುವ ಶಿಕ್ಷಣ ಪದ್ಧತಿಯನ್ನು ನಾವು ನಿರ್ಮಿಸಬೇಕಾಗಿದೆ. ಸೋಲುಗಳ ಬಗ್ಗೆ ಚಿಂತನೆ ಅಗತ್ಯವಾಗಿದೆ ಎಂದು ಜಮಖ–ಂಡಿಯ ಬಾಗಲಕೋಟೆ ವಿಶ್ವ ವಿದ್ಯಾಲಯದ ಉಪ ಕುಲಪತಿ ಆನಂದ ದೇಶಪಾಂಡೆ ತಿಳಿಸಿದರು.

ಅವರು ಸೋಮವಾರ ಇಲ್ಲಿನ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನ ಸುವರ್ಣ ಮಹೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಇಂದು ಶೈಕ್ಷಣಿಕ ಹಾಗೂ ತಂತ್ರಜ್ಞಾನದ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳು ಉಂಟಾಗಿವೆ. ಬದಲಾವಣೆಗೆ ತಕ್ಕಂತೆ ಉಪನ್ಯಾಸಕರೂ ಕೂಡಾ ಬದಲಾಗಬೇಕು. ಇಂದಿನ ಮತ್ತು ಭವಿಷ್ಯದ ಸಮಸ್ಯೆಗಳ ಕುರಿತು ನಾವು ಅರಿತು ಕೊಳ್ಳಬೇಕಾಗಿದೆ. ಪಠ್ಯಕ್ರಮದ ಬದಲಾವಣೆಗೆ ಗಮನ ನೀಡುವುದರ ಜೊತೆಗೆ ಮೌಲ್ಯಗಳನ್ನು



ಹೆಚ್ಚಿಸುವುದು ಅಗತ್ಯವಾಗಿದೆ ಎಂದು ದೇಶಪಾಂಡೆ ತಿಳಿಸಿದರು.

ರಬಕವಿಯ ಬ್ರಹ್ಮಾನಂದ ಆಶ್ರಮದ ಗುರುಸಿದ್ಧೇಶ್ವರ ಸ್ವಾಮೀಜಿ ಮಾತನಾಡಿ, ತಮ್ಮಣ್ಣಪ್ಪ ಚಿಕ್ಕೋಡಿಯವರು ವಚನ ಸಾಹಿತ್ಯ ಸಂಶೋಧನೆ ಮಾಡಲು ಡಾ. ಹಳಕಟ್ಟಿಯವರಿಗೆ ಪ್ರೇರಣೆಯಾಗಿದ್ದರು. ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಪ್ರೀತಿ, ಅಭಿಮಾನ ಮತ್ತು ಗೌರವಗಳನ್ನು ಬೆಳೆಸಿಕೊಳ್ಳಬೇಕಾಗಿದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೆ ಕುಟುಂಬದ ಜೊತೆಗೆ ಉತ್ತಮ ರಾಷ್ಟ್ರವನ್ನು ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದರು.

ಬನಹಟ್ಟಿಯ ಹಿರೇಮಠದ ಶರಣಬಸವ ಶಿವಾಚಾರ್ಯರು, ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ನಿರ್ದೇಶಕ ಭೀಮಶಿ ಮಗದುಮ್, ಪ್ರಾಚಾರ್ಯ ಜಿ. ಆರ್. ಜುನ್ನಾಯ್ಕರ್, ಮಂಜುನಾಥ ಬೆನ್ನೂರ, ಮನೋಹರ ಶಿರಹಟ್ಟಿ ಮಾತನಾಡಿದರು.

ಜನತಾ ಶಿಕ್ಷಣ ಸಂಘದ ಉಪಾಧ್ಯಕ್ಷ ಬಸವರಾಜ ಭದ್ರನವರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಾಧ್ಯಕ್ಷ ಬಸವಂತ ಜಾಡಗೌಡ, ಗೌರವ ಕಾರ್ಯದರ್ಶಿ ರಾಜಶೇಖರ ಸೋರಗಾಂವಿ, ಶ್ರೀಶೈಲ ಯಾದವಾಡ, ಎಂ. ಜಿ. ಕೆರೂರ, ಪಂಡಿತ ಹನಗಂಡಿ, ಮಹಾದೇವಿ ಕೊಳಕಿ, ಪ್ರಕಾಶ ಕೆಂಗನಾಳ, ಸುರೇಶ ನಡೋಣಿ, ರಶ್ಮಿ ಕೊಟಕನೂರ, ಎಸ್. ಬಿ. ಉಕ್ಕಲಿ, ಗೀತಾ ಸಜ್ಜನ, ರೇಷ್ಮಾ ಗಜಾಕೋಶ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಬ್ರಿಜ್ಮೋಹನ ಡಾಗಾ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಪ್ರಕೃತಿಗೆ ಇಲ್ಲದ ಭೇದಭಾವ ಮನುಷ್ಯನಿಗೆ ಏಕೆ?

ಪ್ರಕೃತಿಯು ಯಾವುದೇ ಭೇದ ಭಾವ ಮಾಡದೆ ಎಲ್ಲ ಮನುಷ್ಯರಿಗೂ ನೀರು, ಬೆಳಕು ಗಾಳಿಯನ್ನು ಒದಗಿಸುತ್ತದೆ, ಸೂರ್ಯನು ಎಂದಾದರೂ ನಾನು ಕೇವಲ ಹಿಂದೂ ಗಳಿಗೆ ಮಾತ್ರ ಬೆಳಕನ್ನು ಒದಗಿಸುತ್ತೇನೆ ಇನ್ನುಳಿದವರಿಗಲ್ಲ ಎಂದ–ರೆ...., ಮನುಷ್ಯ ಕುಲ ಉಳಿಯುವುದಾದರೂ ಹೇಗೆ?

ಪ್ರಕೃತಿಯ ಜೀವರಾಶಿಯಲ್ಲಿ ಜೀವಿಸುವ ಕೋಟ್ಯಾಂತರ ಜೀವರಾಶಿಗಳ ಪೈಕಿ ಮನುಷ್ಯ ಜೀವಿಯೂ ಒಂದು, ಆದರೆ ಬುದ್ಧಿ ಶಕ್ತಿಯಲ್ಲಿ ಮೇಲುಗೈ ಇದ್ದು , ವೈಜ್ಞಾನಿಕ ಹಾಗೂ ಇತರ ಕ್ಷೇತ್ರಗಳಲ್ಲಿ ಸಾಧನೆಯನ್ನು ಮಾಡಿದ್ದಾನೆ ನಿಜ, ಆದರೆ ನೈತಿಕತೆಯಲ್ಲಿ ಹಾಗೂ ವರ್ತನೆಯಲ್ಲಿ ಉಳಿದ ಪ್ರಾಣಿಗಳಿಗೂ ಕೀಳು ಎಂಬುದನ್ನು ಕೆಲವು ಸಲ ನಿರೂಪಿಸಿ ಬಿಟ್ಟಿದ್ದಾನೆ,. ಪ್ರಾಣಿ ಪಕ್ಷಿಗಳು ಆಹಾರಕ್ಕಾಗಿ ಮಾತ್ರ ಹೋರಾಡುತ್ತವೆ, ಆದರೆ ನಾಳೆ ಬಗ್ಗೆ ಅವೆಂದಿಗೂ ಚಿಂತಿಸುವುದಿಲ್ಲ, ಪ್ರಕೃತಿಗೆ ಅನುಗುಣವಾಗಿ ನಡೆಯುತ್ತವೆ, ಆದರೆ ಮನುಷ್ಯ ಮಾತ್ರ ತನ್ನ ಅತಿಯಾದ ಸ್ವಾರ್ಥ ಹಾಗೂ ದುರಾಸೆಯಿಂದ, ಕೇವಲ ಇಂದಿಗೆ ಮಾತ್ರವಲ್ಲ, ನೂರು ವರ್ಷಗಳಿಗೂ ಸಾಕಾಗುವಷ್ಟು ಸಂಪತ್ತನ್ನು ಸಂಗ್ರಹಿಸಲು ನಿರತನಾಗುತ್ತಾನೆ. ಆಸೆಗೆ ಮಿತಿ ಇಲ್ಲ ಎಂಬಂತೆ ವರ್ತಿಸುತ್ತಾನೆ,, ಪ್ರಕೃತಿಯ ಸಹಜ ಧರ್ಮಗಳಿಗೆ ಅನುಗುಣವಾಗಿ ಪ್ರಾಣಿಗಳು ಜೀವಿಸಿದರೆ, ಮನುಷ್ಯ ಅದನ್ನು ಮೀರಿ ತಾನೇ ರೂಪಿಸಿಕೊಂಡಿರುವ ವಿವಿಧ ಧರ್ಮದ ಚೌಕಟ್ಟಿನೊಳಗೆ ಬದುಕುತ್ತಿದ್ದಾನೆ. ತನ್ನ ದುರಾಸೆಗಳಿಂದ ಪ್ರಕೃತಿಯ ಮಡಿಲನ್ನೇ ನಾಶ ಮಾಡಲು ಹೊರಟಿದ್ದಾನೆ. ತಾನೇ ಮೇಲು ಎಂಬ ಸ್ವ ಪ್ರತಿಷ್ಠೆಯ ಕಾರಣಗಳಿಂದಲೂ, ಸಮಾಜ ಹಾಗು ದೇಶಗಳಲ್ಲಿ ಅಲ್ಲೋಲ ಕಲ್ಲೋಲ ಗಳಿಗೂ ಕಾರಣವಾಗುತ್ತಿದ್ದಾನೆ, ಉದಾಹರಣೆಗೆ ಸ್ವ ಪ್ರತಿಷ್ಠೆಯ ಕಾರಣಗಳಿಂದ ಅಮೆರಿಕವೂ ಭಾರತದ ಮೇಲೆ ಸುಂಕಾಸ್ತ್ರವನ್ನು ಹೇರುತ್ತಿರುವಂತೆಯೇ, ಹಾಗೂ ಪ್ರಪಂಚದಲ್ಲಿ ನಾನೊಬ್ಬ ಹಿರಿಯಣ್ಣ ಎಂಬುವ ಬೀಗುತನದಿಂದಲೇ ವರ್ತಿಸುತ್ತಿರುವ ರೀತಿ ನೋಡಿದ–ರೆ ಇದೊಂದು ಮನುಕುಲದ ಮೇಲಿನ ಸವಾರಿ, ಹಾಗೂ ಮನುಕುಲದ ನಾಂದಿಗೆ ಮುನ್ನುಡಿಯನ್ನು ಬರೆಯುವಂತಿದೆ. ಮನುಷ್ಯ ಜನಾಂಗ ತನ್ನ ರಾಜಕೀಯ ಲೆಕ್ಕಾಚಾರಗಳ ಕಾರಣದಿಂದ, ಮತ್ತೊಂದು ಜನಾಂಗಕ್ಕೆ ತೊಂದ–ರೆ ನೀಡುತ್ತಿರುವುದು, ತಮ್ಮ ಸ್ವಾರ್ಥ ಹಿತಾಸಕ್ತಿಯ ಕಾರಣಗಳಿಂದಾಗಿ,. ಮನುಷ್ಯನ ರೀತಿಯಲ್ಲಿಯೇ ಪ್ರಕೃತಿಯು ತನ್ನ ಸ್ವಾರ್ಥ ಹಿತಾಸಕ್ತಿಯ ಕಾರಣಗಳಿಂದಾಗಿ ಮುನಿದರೆ ಮನುಷ್ಯ ಕುಲವು ಎಲ್ಲಿ ಉಳಿಯುತ್ತದೆ..! ಎಂಬುದನ್ನು ಎಲ್ಲರೂ ನೆನಪಿಡಬೇಕಾದ ವಿಚಾರ.

ಇತ್ತೀಚಿನ ದಿನಗಳಲ್ಲಿ ಪ್ರಪಂಚದಾದ್ಯಂತ ಮನುಷ್ಯ ತನ್ನ ಮೂಲಭೂತ ಸೌಲಭ್ಯಗಳಿಗೆ ಹೋರಾಡುವುದಕ್ಕಿಂತ ಹೆಚ್ಚಾಗಿ ಧರ್ಮದ ವಿಚಾರಗಳಿಗೆ ಹೆಚ್ಚು ಅತಿಯಾಗಿ ತಲೆಕೆಡಿಸಿಕೊಂಡು ರಕ್ತಪಾತಗಳೇ ನಡೆಯುತ್ತಿವೆ.

ಧರ್ಮ ಪ್ರವರ್ತಕರು ಧರ್ಮ ಸಂಸ್ಥಾಪನೆಯನ್ನು ಮಾಡಿರುವುದು ವಾಸ್ತವದಲ್ಲಿ ಜನರ ಹಿತಕ್ಕಾಗಿ ಮತ್ತು ಜನರ ಉದ್ಧಾರಕ್ಕಾಗಿ ಎಂದು ಹೇಳಲಾಗಿದೆ, ಆದರೆ ಇತ್ತೀಚಿನ ದಿನಗಳಲ್ಲಿ ಕೆಲವರು ಧರ್ಮವನ್ನು ರಾಜಕೀಯ ಅಸ್ತ್ರವನ್ನಾಗಿ ಮಾಡಿಕೊಂಡು ಮನುಷ್ಯತ್ವಕ್ಕೆ ಬೆಲೆ ಇಲ್ಲದಂತಾಗಿ ಜ್ಞಾನ ಸಂಪತ್ತಿಗೂ ಕವಡೆ ಕಾಸಿನ ಕಿಮ್ಮತ್ತಿಲ್ಲದಂತಾಗಿದೆ.

ಭಾನು ಮುಸ್ತಾಕ್ ರವರು ಮುಸ್ಲಿಂ ಧರ್ಮದಲ್ಲಿ ಹುಟ್ಟಿದ ಮಹಿಳೆ ಆ ಧರ್ಮದಲ್ಲಿನ ಮಹಿಳೆಯರ ಮೇಲಿನ ಕಟ್ಟುಪಾಡು, ಬುರುಕ, ಮಹಿಳೆಯರ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತಹ ಅನಾಗರಿಕ ಪದ್ಧತಿಯನ್ನು ತಮ್ಮ ಸಾಹಿತ್ಯದಲ್ಲಿ ಬಿಂಬಿಸಿಕೊಂಡಿದ್ದಾರೆ. ಮತ್ತು ಅದೇ ಸಮಾಜದಲ್ಲಿ ಬದಲಾವಣೆಯನ್ನು ಕಾಣಲು ಆಶಾಭಾವನೆಯನ್ನು ಸಹ ವ್ಯಕ್ತಪಡಿಸುತ್ತಾರೆ.

ಕನ್ನಡದ ನಾಡಿನ ಸಾಹಿತ್ಯದ ಹಿರಿಮೆಯನ್ನು ತಮ್ಮ ಕಾದಂಬರಿ ಹೃದಯ ಹಣತೆ ( ಹಾರ್ಟ್ ಲ್ಯಾಂಪ್) ಕೃತಿಯ ಮೂಲಕ ವಿಶ್ವದ ಗಮನ ಸೆಳೆದವರು.

ಇವರ ಸಾಧನೆಯನ್ನ ಪರಿಗಣಿಸಿ ಕರ್ನಾಟಕ ಸರ್ಕಾರವು ಮೈಸೂರಿನ ಸಾಂಸ್ಕೃತಿಕ ಹಬ್ಬವಾದ ದಸರಾ ಉದ್ಘಾಟನೆಗೆ ಇವರಿಗೆ ಆಹ್ವಾನ ನೀಡಿದೆ, ಇದನ್ನು ಸಹಿಸದ ಕೆಲ ಹಿತಾಸಕ್ತಿಗಳು ಜ್ಞಾನ ಹಾಗೂ ಮನುಷ್ಯತ್ವಕ್ಕೆ ಬೆಲೆ ಇಲ್ಲದ ಹಾಗೆ ಒಂದು ಧರ್ಮದ ಚೌಕಟ್ಟಿನೊಳಗೆ ಅವರನ್ನು ಬಂಧಿಸಲು ಹೊರಟಿರುವುದು, ಇದು ಜಾತ್ಯತೀತ ಸಮಾಜಕ್ಕೆ ಒಂದು ದೊಡ್ಡ ಪೆಟ್ಟು.

ವ್ಯಕ್ತಿಯನ್ನು ಅವರ ಜ್ಞಾನ ಹಾಗೂ ಸಾಧನೆಯಿಂದ ಅಳೆಯಬೇಕೇ ಹೊರತು ಒಂದು ನಿರ್ದಿಷ್ಟ ಧರ್ಮದಿಂದಲ್ಲ. ಯಾರೂ ಕೂಡ ಅರ್ಜಿ ಹಾಕಿಕೊಂಡು ನಿರ್ದಿಷ್ಟ ಧರ್ಮದಲ್ಲಿ ಹುಟ್ಟಿರುವುದಿಲ್ಲ ಎಂಬುದನ್ನು ನೆನಪಿಡಬೇಕಾಗಿದೆ.

ನಾವು ಭಾರತೀಯರು ಮೊದಲಿನಿಂದಲೂ ಧರ್ಮ ಸಹಿಷ್ಣುಗಳು, ಮತ್ತೊಂದು ಧರ್ಮವನ್ನು ಸಹಿಸಬೇಕಾಗಿರುವುದು, ಅವರನ್ನು ಗೌರವಿಸ ಬೇಕಾಗಿರುವುದು, ನಮ್ಮೆಲ್ಲಾ ಭಾರತೀಯರ ಕರ್ತವ್ಯ, ಅದು ಹಿಂದೂ ಧರ್ಮದ ಕರ್ತವ್ಯವೂ ಹೌದು, ಜೊತೆಗೆ ಯಾವುದೇ ಧರ್ಮದ ಕರ್ತವ್ಯವೂ ಕೂಡ ಅದೇ ಆಗಿದೆ.

ಹೀಗಿದ್ದರೂ ಕೂಡ ಇತ್ತೀಚಿಗೆ ಅವರನ್ನು ಸಾರ್ವಜನಿಕವಾಗಿ ವಾಚಾಮ ಗೋಚರವಾಗಿ ವ್ಯಕ್ತಿ ಗೌರವಕ್ಕೆ ಧಕ್ಕೆ ತರುವ ಹಾಗೆ ಮಾತನಾಡುತ್ತಿರುವುದು, ಕೆಲ ಸಂಘಟನೆ ಹಾಗೂ ರಾಜಕೀಯ ಪಕ್ಷಗಳಿಗೆ ಸಲ್ಲು ವಂತಹ ಗೌರವವಲ್ಲ.

ಧರ್ಮವು ವ್ಯಕ್ತಿಯಿಂದಲೇ ಸೃಷ್ಟಿಯಾದದ್ದು, ಧರ್ಮ ಸಂಸ್ಥಾಪಕರಿಗೆ ಮೊದಲು ಧರ್ಮವೆಂಬುದೇ ಇರಲಿಲ್ಲ.

ಹಾಗಾಗಿ ಧರ್ಮವೆಂಬುದು ನಮಗೆ ನಾವೇ ನಿರ್ಮಿಸಿಕೊಂಡ ಬೇಲಿಗಳು (ಕಟ್ಟಳೆಗಳು,) ನಿಯಮಗಳು ಆಗಿದ್ದು, ಈ ಕಟ್ಟಳೆಗಳೇ ಮುಂದಿನ ದಿನಗಳಲ್ಲಿ ಸಂಪ್ರದಾಯಗಳಾಗಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ.

ಧರ್ಮವಿರುವುದು ಮನುಷ್ಯನ ಅಂತ: ಪ್ರಜ್ಞೆಯನ್ನು ಜಾಗೃತಗೊಳಿಸಲಿಕ್ಕಾಗಿ ಎಂದು ಸ್ವಾಮಿ ವಿವೇಕಾನಂದರು ನುಡಿದಿದ್ದಾರೆ. ಹಾಗಾಗಿ ಧರ್ಮವನ್ನು ತಮ್ಮ ಅಂತ:ಪ್ರಜ್ಞೆಯನ್ನು ಜಾಗೃತಗೊಳಿಸಲಿಕ್ಕಾಗಿ, ಮಾನವನ ಉದ್ಧಾರಕ್ಕಾಗಿ ಧರ್ಮವನ್ನು ಬಳಸಿಕೊಳ್ಳಬೇಕೆ ವಿನಹ ರಾಜಕೀಯ ಗಳಿಗಾಗಿ ಧರ್ಮವನ್ನು ಬಳಸಿಕೊಳ್ಳುವುದು ಸಮಾಜಕ್ಕೆ ಮಾರಕ.

ಹಿಂದೊಮ್ಮೆ ಪೇಜಾವರ ಮಠದ ಹಿರಿಯ ಶ್ರೀಗಳಾಗಿದ್ದ ವಿಶ್ವೇಶ್ವರ ತೀರ್ಥ ಸ್ವಾಮೀಜಿಯವರು " ರಾಜಕೀಯದಲ್ಲಿ ಧರ್ಮ ಇರಬೇಕು, ಆದರೆ ಧರ್ಮದಲ್ಲಿ ರಾಜಕೀಯ ಇರಬಾರದು,ಎಂದು ಹೇಳಿದ್ದರು,ಈ ಮಾತು ಕೆಲ ಹಿಂದುಗಳ ಹೆಸರಿನಲ್ಲಿ ರಾಜಕೀಯ ಮಾಡಲು ಹೊರಟಿರುವವರಿಗೆ ಚಾಟಿ ಬೀಸಿದಂತಿದೆ.

ವಿಶ್ವಮಾನವ ಕುವೆಂಪುರವರು ಹೇಳುತ್ತಾರೆ ' ಮೊದಲು ಮಾನವನಾಗು ' ಮೌಢ್ಯತೆ ಯನ್ನು ಧಿಕ್ಕರಿಸಿ ಜಾತೀಯ ಸಂಕೋಲೆಗಳಿಂದ ಹೊರಬನ್ನಿ, ಎಂದಿದ್ದಾರೆ.

ಈ ಪ್ರಪಂಚದಲ್ಲಿ ನಡೆದಿರುವ ಸಾವು ನೋವುಗಳನ್ನು ಲೆಕ್ಕ ತೆಗೆದುಕೊಂಡರೆ ಧರ್ಮಕ್ಕಾಗಿ ನಡೆದಿರುವ ಸಾವುಗಳು ಹೆಚ್ಚು ಎಂದು ಹೇಳಲಾಗಿದೆ.

ಧರ್ಮವು, ವ್ಯಕ್ತಿ ತಾನು ನ್ಯಾಯ ರೀತಿ, ಸತ್ಯ ಧರ್ಮಗಳಿಗೆ ಅನುಗುಣವಾಗಿ ನಡೆದು ಇತರರಿಗೆ ಒಳ್ಳೆಯದನ್ನು ಮಾಡುವುದೇ ನಿಜವಾದ ಧರ್ಮ ಎಂಬುದು ಅನುಭವಿಗಳ ಮಾತಾಗಿದೆ.

ಹೀಗೆ ಧರ್ಮ ಧರ್ಮಗಳ ನಡುವೆ ನಡೆಯುತ್ತಿರುವ ಕಿತ್ತಾಟ, ರಕ್ತಪಾತಗಳನ್ನು ಮನಗಂಡ ಎಡಚಿಂತಕರು ಧರ್ಮವು ಒಂದು ಅಫೀಮು ಇದ್ದ ಹಾಗೆ ಎಂದಿದ್ದಾರೆ.

ಪ್ರಸ್ತುತ ಕಾಲಘಟ್ಟಗಳಲ್ಲಿ ಧರ್ಮ ಧರ್ಮಗಳ ಹೆಸರಿನಲ್ಲಿ ಕಿತ್ತಾಡಿ, ರಾಜಕೀಯ ಮಾಡಿ ಸಾಯುತ್ತಿರುವ, ಅನೈತಿಕ ಮನುಷ್ಯರ ಸ್ಥಿತಿಯನ್ನು ನೋಡುತ್ತಿದ್ದರೆ, ಇವರಿಗಿಂತ ಪ್ರಕೃತಿಯಲ್ಲಿನ ಜೀವರಾಶಿ, ಪ್ರಾಣಿ ಪಕ್ಷಿಗಳೇ ಎಷ್ಟೋ ಮೇಲು, ಅವು ಹಂಚಿ ತಿನ್ನುವ ಭಾವನೆಯನ್ನು, ಹಾಗೂ ಒಂದಕ್ಕೊಂದು ಹೊಂದಿಕೊಂಡು ಬಾಳುವ ಮನೋಭಾವನೆಯನ್ನು ಹಾಗೂ ಸ್ವಾರ್ಥವಿಲ್ಲದ ಪ್ರಕೃತಿ ಸಹಜ ಗುಣ ಧರ್ಮವನ್ನು ಅನುಸರಿಸುತ್ತಿವೆ ಯಾದ್ದರಿಂದ ಮನುಷ್ಯನು ಅವುಗಳನ್ನು ನೋಡಿ ಕಲಿಯಬೇಕಾದದ್ದು ಸಾಕಷ್ಟಿದೆ.

ಹಾಗಾಗಿ ದೇವರು ಎಂದರೆ ಒಂದು ಸ್ವಚ್ಛಂದ ಕೊಳದ ನೀರು ಧರ್ಮವೆಂದರೆ ವಿವಿಧ ಬಗೆಯ ತಂಬುಗೆಗಳು, ವಿವಿಧ ಬಗೆಯ ತಂಬುಕಗೆಗಳಲ್ಲಿ ಸ್ವಚ್ಛಂದ ನೀರನ್ನ ತುಂಬಿಕೊಂಡು ಹೋಗುವುದು, ಈ ಕೆಲಸವನ್ನೇ ಧರ್ಮ ಸಂಸ್ಥಾಪಕರು ಮಾಡಿರುವುದು, ಇಲ್ಲಿ ನೀರೇ ದೇವರು ತಂಬುಗೆಗಳೇ ವಿವಿಧ ಧರ್ಮಗಳೆಂದು ಬಣ್ಣಿಸಲಾಗಿದೆ.

ಈಗಾಗಲೇ ಜಾತೀಯ ಹೆಸರಿನಲ್ಲಿ ಕಿತ್ತಾಡುತ್ತಿರುವ ಮಂದಿ ಬಹಳಷ್ಟು ಇರುವಾಗ, ಇದರ ಮಧ್ಯದಲ್ಲಿಯೇ ಧರ್ಮದ ಹೆಸರಿನಲ್ಲಿ ಜನರನ್ನ ಇಬ್ಭಾಗ ಮಾಡಲು ಹೊರಟಿರುವುದು, ಇದೊಂದು ದುರಂತ ಹಾಗೂ ಕಳವಳಕಾರಿ.

ಶಿಶುನಾಳ ಶರೀಫರು, ಡಾ. ಎಪಿಜೆ ಅಬ್ದುಲ್ ಕಲಾಂ ರವರು ಕೆಸರಿನಲ್ಲಿ ಬೆಳೆದ ಕಮಲದಂತೆ ಧರ್ಮದಲ್ಲಿದ್ದರೂ ಧರ್ಮಕ್ಕೆ ಅಂಟಿಕೊಳ್ಳದಂತೆ ಬೆಳೆದು ಅಗಾಧವಾದದ್ದನ್ನು ಸಾಧಿಸಿ ತೋರಿಸಿಕೊಟ್ಟಿದ್ದಾರೆ,

ಇಂದಿನ ರಾಜಕಾರಣಿಗಳಿಗೆ, ಸಂಘಟಕರಿಗೆ ಇಂತಹ ಮಹನೀಯರು ಆದರ್ಶವಾಗಬೇಕಿದೆ.

ಇನ್ನಾದರೂ ಧರ್ಮ, ಜಾತಿ ಎಂದು ಕಿತ್ತಾಡದೆ "ಮನುಷ್ಯಕುಲಂ ತಾನೊಂದೇ ವಲಂ " ಎನ್ನುವ ಆದಿಕವಿ ಪಂಪನ ಮಾತನ್ನು ನಾವು ಸದಾ ಸ್ಮರಿಸಿಕೊಂಡು ಒಂದಾಗಿ ಬಾಳಬೇಕಿದೆ. ಈ ದೇಶದ ಪ್ರಜಾಪ್ರತಾತ್ಮಕ ಆಶಯಗಳನ್ನು ಉಳಿಸಬೇಕಾಗಿದೆ. ಹಿಂದೂ ನಾವೆಲ್ಲ ಒಂದು ಎನ್ನುವ ಸಂಘಟನೆಗಳು ಜಾತಿಯನ್ನು ಅಳಿಸಿ, ಎಲ್ಲರನ್ನೂ ಒಳಗೊಳ್ಳುವ ಮೂಲಕ, ಸಂಘಟನೆಯನ್ನು ಬಲಪಡಿಸಿದರೆ ಆಗ ಮಾತ್ರವೇ ಹಿಂದೂ ಸಮಾಜ ಬಲಿಷ್ಠ ಎಂದು ಹೇಳಬಹುದಾಗಿದೆ.

ಒಟ್ಟಿನಲ್ಲಿ ಎಷ್ಟೇ ಸಂಘಟನೆ ಎಷ್ಟೇ ಜಾತಿಗಳಿದ್ದರೂ ಸಹ ಭಾರತದಂತಹ ದೇಶದಲ್ಲಿರುವ ನಾವು ಪರಧರ್ಮ ಸಹಿಷ್ಣುತೆಯನ್ನು ಹೊಂದುವುದು ಅತಿ ಮುಖ್ಯ. ಹಾಗಾಗಿ ಮನುಷ್ಯತ್ವಕ್ಕೆ ಹೆಚ್ಚಿನ ಬೆಲೆಯನ್ನು ನೀಡಬೇಕಾಗಿದೆ.

* * *



**ಲೇಖಕರು :**
**ಡಾ, ಸತ್ಯಮೂರ್ತಿ ಗೂಗಿ,**
**ಚಿಂತಕರು, ಬೆಂಗಳೂರು.**
**ಮೊಬೈಲ್ 8073312287**

## ಖಮರ್ ಉಲ್ ಇಸ್ಲಾಂ ಫೌಂಡೇಶನ್ ವತಿಯಿಂದ ಶವಾಗಾರ ಫ್ರಿಜರ್ ಬಾಕ್ಸ್ ದಾನ

**ಕಲಬುರಗಿ :** ಖಮರ್ ಉಲ್ ಇಸ್ಲಾಂ ಫೌಂಡೇಶನ್ ವತಿಯಿಂದ ಅಮನ್ ನಗರದ ಮಸ್ಜಿದ್–ಎ–ಸಬೀರ್ಗೆ ಶವಾಗಾರ ಫ್ರಿಜರ್ ಬಾಕ್ಸ್ ಅನ್ನು ದಾನ ಮಾಡಲಾಯಿತು.

ಖಮರ್ ಉಲ್ ಇಸ್ಲಾಂ ಫೌಂಡೇಶನ್ ವಾರ್ಡ್ ಸಂಖ್ಯೆ 14ರಲ್ಲಿ ಬರುವ ಅಮನ್ ನಗರದ ಮಸ್ಜಿದ್–ಎ–ಸಬೀರ್ಗೆ ಶವಾಗಾರ ಫ್ರೀಜರ್ ಬಾಕ್ಸ್ ಅನ್ನು ದಾನ ಮಾಡುವ ಮೂಲಕ ಸಮುದಾಯ ಕಲ್ಯಾಣಕ್ಕಾಗಿ ತನ್ನ ಸಮರ್ಪಣೆಯನ್ನು ಮತ್ತೊಮ್ಮೆ ದೃಢಪಡಿಸಿದೆ. ಈ ಉದಾತ್ತ ಕಾರ್ಯವು ದುಃಖದ ಸಮಯದಲ್ಲಿ ಕುಟುಂಬಗಳನ್ನು ಬೆಂಬಲಿಸುವುದು ಮತ್ತು ನಷ್ಟದ ಕ್ಷಣಗಳಲ್ಲಿ ಘನತೆಯನ್ನು ಖಚಿತಪಡಿಸುವ ಗುರಿಯನ್ನು ಹೊಂದಿದೆ.




ಈ ಸಂದರ್ಭದಲ್ಲಿ, ಫೌಂಡೇಶನ್‌ನ ಅಧ್ಯಕ್ಷ ಜನಾಬ್ ಫರಾಜ್ ಉಲ್ ಇಸ್ಲಾಂ ಸಹಾಬ್ ಮತ್ತು ಇತರ ಸದಸ್ಯರು ಉಪಸ್ಥಿತರಿದ್ದರು. ಅವರ ಭಾಗವಹಿಸುವಿಕೆಯು ಮಾನವೀಯತೆಗೆ ಸಹಾನುಭೂತಿ ಮತ್ತು ಜವಾಬ್ದಾರಿಯಿಂದ ಸೇವೆ ಸಲ್ಲಿಸುವ ಫೌಂಡೇಶನ್‌ನ ದೃಷ್ಟಿಕೋನವನ್ನು ಎತ್ತಿ ತೋರಿಸಿತು.

ಮಾನವೀಯ ಸೇವೆ ಮತ್ತು ಅರ್ಥಪೂರ್ಣ ಸಾಮಾಜಿಕ ಉಪಕ್ರಮಗಳ ಮೂಲಕ ಸಮಾಜವನ್ನು ಉನ್ನತೀಕರಿಸುವ ಫೌಂಡೇಶನ್‌ನ ನಿರಂತರ ಧ್ಯೇಯಕ್ಕೆ ಈ ಕೊಡುಗೆ ಮತ್ತೊಂದು ಉದಾಹರಣೆಯಾಗಿದೆ.

## ಭೀಮಾತೀರದ ಗ್ರಾಮಗಳಿಗೆ ತಹಸೀಲ್ದಾರ ನಾಗಯ್ಯ ಹಿರೇಮಠ್ ಭೇಟಿ

**ವಾಡಿ :** ನೆರೆರಾಜ್ಯ ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಭಾರಿಮಳೆಯಿಂದ ಭೀಮಾನದಿ ಅಪಾಯ ಮಟ್ಟವನ್ನು ಮೀರಿ ಉಕ್ಕಿ ಹರಿಯುತ್ತಿದೆ.

ನದಿ ಪಾತ್ರದ ಗ್ರಾಮಗಳಲ್ಲಿ ಪ್ರವಾಹ ಭೀತಿ ಉಂಟಾಗಿದೆ. ಉಜನಿ ಆಣೆಕಟ್ಟಿನಿಂದ ಅಪಾರ ಪ್ರಮಾಣದ ನೀರು ಭೀಮಾ ನದಿಗೆ ಹರಿದು ಬರುತ್ತಿರುವುದರಿಂದ ಚಿತ್ತಾಪುರ ತಾಲ್ಲೂಕಿನ ಕಾಗಿಣಾ ಮತ್ತು ಭೀಮಾ ನದಿಗಳು ಭೋರ್ಗರೆದುಉಕ್ಕಿ ಹರಿದು ನದಿ ಅಂಚಿನ ಗ್ರಾಮಗಳಲ್ಲಿ ನೆರೆಹಾವಳಿಯ ಭೀತಿಮನೆಮಾಡಿದ್ದು, ಪರಿಸ್ಥಿತಿಯ ಮೇಲೆ ನಿಗಾವಹಿಸಲಾಗಿದೆ ಎಂದು ಚಿತ್ತಾಪುರ ತಹಸೀಲ್ದಾರ್ ನಾಗಯ್ಯ ಹಿರೇಮಠ್ ಅವರು ತಿಳಿಸಿದ್ದಾರೆ



ಶನಿವಾರ ಅವರು ನದಿ ಪಾತ್ರದ ಗ್ರಾಮ ಗಳಿಗೆ ಭೇಟಿ ನೀಡಿದಪರಿಸ್ಥಿತಿ ಪರಿಶೀಲಿಸಿಗ್ರಾಮಸ್ಥರಿಗೆ ಸುರಕ್ಷತೆ ಬಗ್ಗೆ ಮಾಹಿತಿ ನೀಡಿದರು ಯಾವುದೆ ಕಾರಣಕ್ಕೂ ನದಿಯ ದಂಡೆಗೆ ಹೋಗಬಾರದು ಜಾನುವಾರ ನದಿಯ ಕಡೆ ಬಿಡಬಾರದು ಎಂದು ಕಡಬುರ್ ಚಾಮನೂರ್ ಸನ್ನತಿ ಕುಂದನೂರ ಗ್ರಾಮಗಳ್ಳಿಗೆ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಮಾತನಾಡಿ ಪ್ರವಾಹ ಬಗ್ಗೆ ಮುನ್ನಚ್ಚರಿಕೆ ಕ್ರಮ ಬಗ್ಗೆ ತಿಳಿಸಿದರು ಈ ಸಂದರ್ಭದಲ್ಲಿ ಗ್ರೇಡ್ 2 ತೆಹಸೀಲ್ದಾರ ರಾಜಕುಮಾರ ಮರ್ತುರಕರ,ತಾ ಪ ಸಹಾಯಕ ನಿರ್ದೇಶಕ ಪಂಡಿತ ಸಿಂದೆನಾಲವಾರ,ಕಂದಾಯ ನಿರಕ್ಷಕ ಪ್ರಶಾಂತ್ ರಾಠೋಡ,ಪಿ ಡಿ ಓ ಮಹೇಶ್ ಕುಲಕರ್ಣಿ ಗ್ರಾಮ ಲೇಖಿಕಿ ಶಶಿಕಲಾಹೀರಾಪುರ ಇದ್ದರು

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State

Designed by MKG-9535762618